ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ರಾಯಪುರದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವಿರುದ್ಧ ಬುಧವಾರ ನಡೆದ 2ನೇ ಏಕದಿನ ಪಂದ್ಯದಲ್ಲಿ ಶತಕ ಗಳಿಸಿದ ವಿರಾಟ್ ಕೊಹ್ಲಿ (102) ಹಾಗು ಋತುರಾಜ್ ಗಾಯಕವಾಡ್(105 ರನ್). ಭಾರತ 358ಕ್ಕೆ 5...



04 ಡಿಸೆಂಬರ್ 2025 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 262 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸಕರಾಕರದ ಸರ್ವರ್ ಸ್ಲೋ ಸಾರ್ವಕಾಲಿಕ ! » 2



ವಿಶೇಷ ಚೇತನರು ಎಲ್ಲರಂತೆ ಸಮಾನರು » 3



ಅವ್ಯವಸ್ಥೆಯ ಆಗರ ಹೊನ್ನಮಾರನಹಳ್ಳಿ ಗ್ರಾಮ » 4

# ಮುಗಿಯದ ಸಿಎಂ ಬದಲಾವಣೆ ಪ್ರಹಸನ

## ಕೆ.ಸಿ.ವೇಣುಗೋಪಾಲ್ ಜೊತೆ ಸಿದ್ದರಾಮಯ್ಯ ಚರ್ಚೆ | ದೆಹಲಿಗೆ ತೆರಳಿದ ಡಿ.ಕೆ.ಶಿವಕುಮಾರ್

• ಪ್ರಜೋದಯ ವರದಿ

**ಬೆಂಗಳೂರು :** ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಪ್ರಹಸನಕ್ಕೆ ತಾತ್ಕಾಲಿಕ ವಿರಾಮ ಬಿದ್ದಿದೆ ಎನ್ನುವ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣು ಗೋಪಾಲ್ ಅವರನ್ನು ಭೇಟಿಯಾಗಿ ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಿರುವುದು ಕುತೂಹಲ ಕೆರಳಿಸಿದೆ.

ಹೈಕಮಾಂಡ್ ಸೂಚನೆ ಬಳಿಕ ಇಬ್ಬರೂ ನಾಯಕರು ಪರಸ್ಪರ ಬೆಳಗಿನ ಉಪಾಹಾರ ಆಯೋಜಿಸಿ ತಮ್ಮಲ್ಲಿ ಯಾವ ಬಿರುಕಿಲ್ಲ. ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆಂಬ ಸಂದೇಶ ಸಾರಿದ್ದರು. ಈ ನಡುವೆ ಬುಧವಾರ ಮಂಗಳೂರಿನಲ್ಲಿ ರಹಸ್ಯ ಮಾತುಕತೆ ಚರ್ಚೆಗೆ ಗ್ರಾಸವಾಗಿದೆ. ಮತ್ತೊಂದೆಡೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಖಾಸಗಿ ಕಾರ್ಯಕ್ರಮದ ನೆಪದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ. ರಾಜಕೀಯ ಶಾಶ್ವತ ಅಲ್ಲ, ಅಪ್ಪನ ಆಸ್ತಿಯೂ ಅಲ್ಲವೆಂದು ಸಿದ್ದರಾಮಯ್ಯ ಅವರು



> ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಜೊತೆ ರಾಜಕೀಯ ಚರ್ಚೆ ನಡೆಸಿಲ್ಲ. ಡಿ.ಕೆ. ಶಿವಕುಮಾರ್ ದೆಹಲಿಗೆ ಹೋಗುವುದಕ್ಕೆ ಯಾರೂ ಬೇಡ ಎಂದಿಲ್ಲ. ನನ್ನನ್ನು ಕರೆದಿಲ್ಲ. ಕರೆದರೆ ಮಾತ್ರ ದೆಹಲಿಗೆ ಹೋಗುತ್ತೇನೆ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಹೇಳಿರುವ ಅಸ್ಪಷ್ಟ ಮಾತುಗಳ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

**ಅಧಿಕಾರ ಯಾರಿಗೂ ಶಾಶ್ವತವಲ್ಲ**

ಅಧಿಕಾರ ಯಾರಪ್ಪನ ಆಸ್ತಿಯಲ್ಲ ಎಂಬ ಸಿದ್ದರಾಮಯ್ಯ ಅವರ ಹೇಳಿಕೆ ಬೆನ್ನಲ್ಲೇ ಅವರ ಆಪ್ತ ಬಣದ ಸಚಿವ ಸತೀಶ್ ಜಾರಕಿಹೊಳಿ ಅವರು ಮಂಗಳೂರಿನಲ್ಲಿ ಮಾತನಾಡಿ, ಅವರು ಹಾಗೆ ಹೇಳಿದ್ದಾರೆಂದ ಮಾತ್ರಕ್ಕೆ ಮಾನಸಿಕವಾಗಿ ಸಿದ್ಧರಾಗಿದ್ದಾರೆ ಎಂದರ್ಥವಲ್ಲ. ಮೂವತ್ತು ತಿಂಗಳ ನಂತರವಾದರೂ ಅಧಿಕಾರ ಬಿಡಬಹುದು, ಅದಕ್ಕೂ ಮೊದಲೇ ಬಿಡಬಹುದು. ಮುಖ್ಯಮಂತ್ರಿ ಸ್ಥಾನ ತ್ಯಜಿಸುವುದಂತು ಪಕ್ಕಾ. ಯಾವಾಗಲಾದರೂ ಬಿಡಲೇಬೇಕೆಂದರು.

**ಹೈಕಮಾಂಡ್ ನಿರ್ಧಾರವೇ ಅಂತಿಮ**

ಮುಖ್ಯಮಂತ್ರಿ ಸ್ಥಾನದ ಬಗ್ಗೆ ಸ್ಪಷ್ಟ ನಿರ್ಧಾರವನ್ನು ಹೈಕಮಾಂಡ್ ತೆಗೆದುಕೊಳ್ಳಲಿದೆ, ಯಾವ ರೀತಿಯಲ್ಲಿ ಬಗೆಹರಿಸುತ್ತದೆಂದು ನೋಡೋಣ. ಪಕ್ಷದಲ್ಲಿ ಒಳ್ಳೆಯ ವಾತಾವರಣ ಇರಬೇಕೆಂಬುದು ಕಾರ್ಯಕರ್ತರ ಅಪೇಕ್ಷೆಯಾಗಿದೆ ಎಂದರು.

ಈ ಅವಧಿಯಲ್ಲಿ ದಲಿತ ಮುಖ್ಯಮಂತ್ರಿ ಬಗ್ಗೆ ಯಾವುದೇ ಚರ್ಚೆ ಇಲ್ಲ. ಡಾ.ಜಿ.ಪರಮೇಶ್ವರ್ ಹಿರಿಯ ನಾಯಕರಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಎಲ್ಲವೂ ಮುಗಿದಿದೆ. ಪದೇ ಪದೇ ಅದನ್ನೇ ಪ್ರಸ್ತಾಪಿಸುವುದು ಬೇಡವೆಂದರು.

**ಬ್ರೇಕ್ ಫಾಸ್ಟ್ ಮೀಟಿಂಗ್‌ಗೆ ವ್ಯಂಗ್ಯ**

ಮುಖ್ಯಮಂತ್ರಿ ಹಾಗು ಉಪ ಮುಖ್ಯಮಂತ್ರಿ ನಡುವಿನ ಬ್ರೇಕ್ ಫಾಸ್ಟ್ ಮೀಟಿಂಗ್‌ಗೆ ಮಾಜಿ ಸಚಿವ ಕೆ.ಎನ್.ರಾಜಣ್ಣ ವ್ಯಂಗ್ಯವಾಡಿದ್ದಾರೆ.

ತುಮಕೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬ್ರೇಕ್ ಫಾಸ್ಟ್ ಮೀಟಿಂಗ್ ಬೀಗತನ ಮಾಡಿದಂತೆ. ಮೊದಲು ಒಂದು ಕಡೆ ಹೆಣ್ಣು ನೋಡೋಕೆ ಬರ್ತಾರೆ. ಆ ಮೇಲೆ ಗಂಡು ನೋಡೋಕೆ ಬರ್ತಾರೆ. ಆ ರೀತಿಯಾಗಿದೆ ಈ ಬ್ರೇಕ್ ಫಾಸ್ಟ್ ಮೀಟಿಂಗ್. ಇರೋದು ಏನಿದಿಯೋ ಅದೇ ಇರುತ್ತೆಂದರು.

ಸಿದ್ದರಾಮಯ್ಯನವರು ಅನಿವಾರ್ಯವಾಗಿ ಪದಚ್ಯುತಿಗೊಂಡರೆ ಆಗ ದಲಿತ ನಾಯಕರಾದ ಜಿ. ಪರಮೇಶ್ವರ್ ಅವರೇ ಮುಖ್ಯಮಂತ್ರಿಯಾಗಬೇಕೆಂದು ಪ್ರತಿಪಾದಿಸಿದರು.

### ನಾಯಕರ ಎದುರೇ ಭಿನ್ನ ಘೋಷಣೆ

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಗದ್ದಲ ಮುಗಿದಿಲ್ಲ. ಎಲ್ಲವೂ ಶಮನವಾಗಿದೆ ಎನ್ನುತ್ತಿರುವಾಗಲೇ ಕಾರ್ಯಕರ್ತರು ಭಿನ್ನ ಹಾದಿ ಹಿಡಿದಿದ್ದಾರೆ. ಮಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹೈಡ್ರಾಮಾಕ್ಕೆ ಬುಧವಾರ ಸಾಕ್ಷಿಯಾಗಿದ್ದು, ಸಿದ್ದರಾಮಯ್ಯ ಹಾಗು ಡಿ.ಕೆ. ಶಿವಕುಮಾರ್ ಬೆಂಬಲಿಗರು ಘೋಷಣೆ ಕೂಗುವ ಮೂಲಕ ಅಭಿಮಾನ ಪ್ರದರ್ಶಿಸಿದರು.

ನಾರಾಯಣ ಗುರು ಹಾಗು ಮಹಾತ್ಮ ಗಾಂಧಿ ಸಂವಾದದ ಶತಮಾನೋತ್ಸವ ಹಿನ್ನಲೆಯಲ್ಲಿ ಉಳ್ಳಾಲದಲ್ಲಿ ಸಮಾವೇಶ ನಡೆಯಿತು. ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸಿದ್ದರಾಮಯ್ಯ ಆಗಮಿಸಿದ್ದರು. ಕೆ.ಸಿ.ವೇಣುಗೋಪಾಲ್ ವಿಮಾನ ನಿಲ್ದಾಣದ ಹೊರ ಬರುತ್ತಿದ್ದಂತೆ ಶಿವಕುಮಾರ್ ಅಭಿಮಾನಿಗಳು ಡಿಕೆ, ಡಿಕೆ ಎಂದು ಘೋಷಣೆ ಕೂಗಿದರು. ಕೆಲವೇ ಹೊತ್ತಿನಲ್ಲಿ ಸಿದ್ದರಾಮಯ್ಯ ವಿಮಾನ ನಿಲ್ದಾಣದಿಂದ ಹೊರಬರುತ್ತಿದ್ದಂತೆ ಸಿದ್ದರಾಮಯ್ಯ ಪರವಾಗಿ ಮತ್ತೊಂದು ಬಣದ ಕಾರ್ಯಕರ್ತರು ಘೋಷಣೆ ಕೂಗಿದರು.

# ಚಿಕ್ಕಕೊಂಡಗೊಳ ಭೂವಿವಾದ ಎಸ್‌ಐಟಿ ತನಿಖೆಗೆ ಆಗ್ರಹ

## ಅಧಿವೇಶನದಲ್ಲಿ ಚರ್ಚೆಯಾದರೂ ಕ್ರಮ ಕೈಗೊಳ್ಳದ ಸರ್ಕಾರ : ರೇವಣ್ಣ ಆರೋಪ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಚಿಕ್ಕಕೊಂಡಗೊಳ ಗ್ರಾಮದಲ್ಲಿ 73 ಎಕರೆ ಜಮೀನನ್ನು ಕಾನೂನು ಬಾಹಿರವಾಗಿ ಖಾಯಂ ಸಾಗುವಳಿ ಚೀಟಿ ನೀಡಿರುವ ಬಗ್ಗೆ ತನಿಖೆ ನಡೆಸಲು ಸರ್ಕಾರ ಎಸ್‌ಐಟಿ ರಚಿಸಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಒತ್ತಾಯಿಸಿದರು.

ಬುಧವಾರ ನಗರದ ಪ್ರವಾಸಿ ಮಂದಿರದಲ್ಲಿ ಜೆಡಿಎಸ್ ಶಾಸಕರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಣ್ಣಪುಟ್ಟದಕ್ಕೂ ಎಸ್‌ಐಟಿ ರಚನೆ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.6 ರಂದು ಜಿಲ್ಲೆಗೆ ಆಗಮಿಸುತ್ತಿದ್ದು, ಚಿಕ್ಕಕೊಂಡಗೊಳ ಹಗರಣದ ಬಗ್ಗೆ ದೊಡ್ಡಮಟ್ಟದ ತನಿಖೆಗೆ ವಿಶೇಷ ತಂಡ ರಚಿಸಿ ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿದರು.

ಚಿಕ್ಕಕೊಂಡಗೊಳ ಗ್ರಾಮದ ಸರ್ವೆ ನಂ.7, 10, 25, 106, 107 ಮತ್ತು 137 ರಲ್ಲಿ ಒಟ್ಟು 73.03 ಎಕರೆ ಜಮೀನನ್ನು 97 ಜನರಿಗೆ ಕಾನೂನು ಬಾಹಿರವಾಗಿ ಖಾಯಂ ಸಾಗುವಳಿ ಚೀಟಿ ನೀಡಿರುವ ಬಗ್ಗೆ ವರ್ಷದ ಹಿಂದೆಯೇ ಅಧಿವೇಶನದಲ್ಲಿ ಜಿಲ್ಲೆಯ ಜೆಡಿಎಸ್ ಶಾಸಕರು ಧ್ವನಿ ಎತ್ತಿದ್ದೆವು. ಅದಾದ ಬಳಿಕ ತಂಡವೊಂದನ್ನು ರಚಿಸಿ ತನಿಖೆ ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವು

» ನಾಲ್ಕನೇ ಪುಟದಲ್ಲಿ



> ಮುಖ್ಯಮಂತ್ರಿ ಸಿದ್ದರಾಮಯ್ಯ ಡಿ.6 ರಂದು ಜಿಲ್ಲೆಗೆ ಬರುತ್ತಿದ್ದಾರೆ. ಆದರೆ ಅಭಿವೃದ್ಧಿ ಕಾರ್ಯಕ್ಕೆ ಅನುದಾನ ಕೊಟ್ಟಿಲ್ಲ. ಹಿಂದೆ ನಮ್ಮ ಸರ್ಕಾರದ ಅವಧಿಯಲ್ಲಾದ ಯೋಜನೆಗಳ ಉದ್ಘಾಟನೆಗೆ ಬರುತ್ತಿದ್ದಾರೆ. ರಾಯಚೂರು ಪಾಲಿಕೆಗೆ ಅನುದಾನ ನೀಡಿ, ಹಾಸನ ಪಾಲಿಕೆಗೆ ಹಣ ನೀಡಿಲ್ಲ. ಈ ಬಗ್ಗೆ ಮುಖ್ಯಮಂತ್ರಿ ಬಳಿ ಪ್ರಸ್ತಾಪ ಮಾಡಲಾಗುವುದು.
> -ಹೆಚ್.ಪಿ.ಸ್ವರೂಪ್, ಶಾಸಕ

> ಕಾಂಗ್ರೆಸ್ ಸರ್ಕಾರ ಆಡಳಿತ ಮತ್ತು ವಿರೋಧ ಪಕ್ಷದ ಶಾಸಕರಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿದೆ. ಸರಿಯಾಗಿ ಅನುದಾನ ನೀಡದಿರುವುದರಿಂದ ಸಾರ್ವಜನಿಕರ ಬೇಡಿಕೆಗಳಿಗೆ ಸ್ಪಂದಿಸಲು ಸಾಧ್ಯವಾಗುತ್ತಿಲ್ಲ. ಇನ್ನುಂದೆಯಾದರೂ ಸರ್ಕಾರ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಬೇಕು.
> -ಸಿ.ಎನ್.ಬಾಲಕೃಷ್ಣ, ಶಾಸಕ

# ಹಣ ಗಳಿಕೆಯೊಂದೇ ವಕೀಲರ ಆದ್ಯತೆಯಾಗಬಾರದು

## ವಕೀಲರ ದಿನಾಚರಣೆಯಲ್ಲಿ ಹೈಕೋರ್ಟ್ ನ್ಯಾಯಾಧೀಶ ಹೆಚ್.ಪಿ.ಸಂದೇಶ್ ಸಲಹೆ



• ಪ್ರಜೋದಯ ವರದಿ

**ಹಾಸನ:** ಹಣ ಗಳಿಕೆಯೇ ವಕೀಲರ ಆದ್ಯತೆಯಾಗಬಾರದು. ಅನ್ಯಾಯಕ್ಕೆ ಒಳಗಾದವರ ನೋವಿಗೆ ಬೆಳಕಾಗದಿದ್ದರೆ ವೃತ್ತಿಗೆ ಅಪಚಾರ ಮಾಡಿದಂತಾಗುತ್ತದೆ ಎಂದು ಹೈಕೋರ್ಟ್ ನ್ಯಾಯಾಧೀಶ ಹೆಚ್.ಪಿ.ಸಂದೇಶ್ ಅವರು ಹೇಳಿದರು.

ನಗರದ ಜಿಲ್ಲಾ ವಕೀಲರ ಸಂಘದ ಆವರಣದಲ್ಲಿ ಬುಧವಾರ ನಡೆದ ವಕೀಲರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಯುವ ವಕೀಲರು ನಿರಂತರ ಅಧ್ಯಯನದಲ್ಲಿ ತೊಡಗಬೇಕು. ಪದವಿ ಪಡೆದಾಕ್ಷಣ ಹಣದ ಹಿಂದೆ ಬೀಳಬಾರದು. ಸರಸ್ವತಿಯ ಹಿಂದೆ ನೀವು ಬಿದ್ದರೆ ಲಕ್ಷ್ಮಿ ತಾನಾಗಿಯೇ ಬರುತ್ತದೆ. ಸಾಫ್ಟವೇರ್ ಇಂಜಿನೀಯರ್‌ಗಳಿಗೆ ವಕೀಲರು ಹೋಲಿಕೆ ಮಾಡಿಕೊಳ್ಳಬಾರದು. ಆರಂಭದ ನಾಲ್ಕೈದು ವರ್ಷ ಹಣವಿಲ್ಲದೆ ಕೆಲಸ ಮಾಡಬೇಕಾಗುತ್ತದೆ. ಜ್ಞಾನವಂತರಾದರೆ ಕೆಲಸ ಹಾಗು ಹಣ ಹಿಂಬಾಲಿಸಿ ಬರುತ್ತದೆ ಎಂದರು.

ಕಾನೂನು ಪಾಲನೆ ಬೆಂಚ್ ಮತ್ತು ಬಾರ್‌ನ ಧ್ಯೇಯವಾಗಿದೆ. ತನ್ನ ಹಕ್ಕುಗಳಿಗೆ ಚ್ಯುತಿ ಬಂದಾಗ ವ್ಯಕ್ತಿ ನ್ಯಾಯಾಲಯಕ್ಕೆ ಬರುತ್ತಾನೆ. ಅವನಿಗೆ ನ್ಯಾಯ ಒದಗಿಸಿಕೊಡುವುದು ನಮ್ಮ ಧರ್ಮ. ಪ್ರಪಂಚದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದಾಗಿದೆ. ಕಾನೂನು ಪಾಲನೆ ಕೇವಲ ನ್ಯಾಯಾಧೀಶರ ಕೆಲಸವಲ್ಲ. ವಕೀಲರು ತಮ್ಮ ಜವಾಬ್ದಾರಿ ಅರಿಯಬೇಕು. ವಕೀಲರ ಸಂಘಟನೆಗಳು ಒಳ್ಳೆಯ ವಕೀಲರನ್ನು ಕೊಡುಗೆಯಾಗಿ ನೀಡಿದಾಗ ನ್ಯಾಯಯುತ ಆದೇಶ ನೀಡಲು ನ್ಯಾಯಾಧೀಶರಿಗೆ ನೆರವಾಗುತ್ತದೆ. ಆ ಮೂಲಕ ಸಂವಿಧಾನವನ್ನು ಪಾಲಿಸಿದಂತಾಗುತ್ತದೆ ಎಂದು ಹೇಳಿದರು.

ತಮ್ಮಿಂದ ನ್ಯಾಯ ಕೊಡಿಸಲು ಸಾಧ್ಯವಿಲ್ಲ ಎಂಬುದು ಗೊತ್ತಾದರೆ ಆ ಕ್ಷಣವೇ ಕಕ್ಷಿದಾರರಿಗೆ ನಿಜಾಂಶ ಹೇಳಬೇಕು. ಹಣದಾಸೆಗೆ ಅವರ ಪರವಾಗಿ ಬಣ್ಣದ ಮಾತುಗಳನ್ನಾಡಿ ವೃತ್ತಿಗೆ ಕಳಂಕ ತರಬೇಡಿ ಎಂದು ಸಲಹೆ ನೀಡಿದರು.

ಜನರ ಹಕ್ಕುಗಳಿಗೆ ತೊಂದರೆ ಬಂದಾಗ ಸ್ವಾತಂತ್ರ್ಯ ಮತ್ತು ನ್ಯಾಯ ದೊರಕಿಸಿ ವೃತ್ತಿ ಸಾರ್ಥಕತೆ ಕಂಡುಕೊಳ್ಳಬೇಕು. ಪ್ರಸ್ತುತ ದಿನಗಳಲ್ಲಿ ಯುವ ಜನಾಂಗ ಅತಿಯಾದ ಮೊಬೈಲ್ ಬಳಕೆಯಿಂದ ಅಮೂಲ್ಯ ಸಮಯವನ್ನು ಹಾಳು ಮಾಡಿಕೊಳ್ಳುತ್ತಿದೆ. ಈ ಕುರಿತು ಅರಿವು ಮೂಡಿಸುವ ಕೆಲಸ ಹೆಚ್ಚಬೇಕೆಂದರು.

ಭಾರತದ ಮೊದಲ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರ ಜನ್ಮ ದಿನವನ್ನು ವಕೀಲರ ದಿನವಾಗಿ ಆಚರಿಸಲಾಗುತ್ತದೆ. ರಾಜೇಂದ್ರ ಪ್ರಸಾದ್ ಅವರು ಕಾನೂನು ಪದವಿ ಪಡೆದರೂ ಬಿಹಾರದಲ್ಲಿ ವೃತ್ತಿ ಆರಂಭಿಸಲು ನ್ಯಾಯಾಲಯಗಳು ಇಲ್ಲದ ಕಾರಣಕ್ಕೆ ಕೊಲ್ಕತ್ತಾದಲ್ಲಿ ಕೆಲಸ ಮಾಡುತ್ತಾರೆ. ಬಿಹಾರದಲ್ಲಿ ನ್ಯಾಯಾಲಯ ಸ್ಥಾಪನೆಯಾದ ಬಳಿಕ ವಾಪಾಸ್ಸಾಗುತ್ತಾರೆಂದರು.

1885 ರಿಂದ ಮಹಾತ್ಮ ಗಾಂಧಿ

» ನಾಲ್ಕನೇ ಪುಟದಲ್ಲಿ

# ಮಠಾಧೀಶರಿಗೇಕೆ ರಾಜಕೀಯ ಗೊಡವೆ: ಎಟಿಆರ್ ಪ್ರಶ್ನೆ

## ಸ್ವಾಮೀಜಿಗಳೆಲ್ಲರೂ ಒಗ್ಗೂಡಿ ಪರಿಸರ ಸಂರಕ್ಷಣಾ ಅಭಿಯಾನ ಪ್ರಾರಂಭಿಸಲು ಸಲಹೆ

• ಪ್ರಜೋದಯ ವರದಿ

**ಹಾಸನ:** ಕೆಲ ಮಠಾಧೀಶರು ಒಂದು ಜಾತಿ, ಒಬ್ಬ ವ್ಯಕ್ತಿ ಪರವಾಗಿ ನಿಲ್ಲುವುದು ಸರಿಯಲ್ಲ, ಅವರಿಗೇಕೆ ರಾಜಕೀಯದ ಗೊಡವೆ. ಜಾತಿ ಕೇಂದ್ರಿತವಾಗಿ ಮಾತನಾಡುವುದನ್ನು ನೋಡಿದರೆ ದುಃಖವಾಗುತ್ತದೆ ಎಂದು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರು ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ರಾಜ್ಯದ ರಾಜಕಾರಣ ತುಂಬಾ ಕೊಳಕಾಗಿದೆ. ಆ ಕೊಳಕು, ಅಂಕು-ಡೊಂಕುಗಳನ್ನು ತಿದ್ದಲು ಮಾರ್ಗದರ್ಶನ ಮಾಡಬೇಕಿರುವುದು ಧರ್ಮ ಗುರುಗಳ ಕರ್ತವ್ಯ. ನಮ್ಮದು ಧರ್ಮ ನಿರಪೇಕ್ಷಿತ ರಾಷ್ಟ್ರ ಎಂದರು.

ಧರ್ಮ ಗುರುಗಳ ಹೇಳಿಕೆಗಳು ಎಲ್ಲರನ್ನೂ ಘಾಸಿಗೊಳಿಸುತ್ತವೆ. ನೋವಿನಿಂದ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ, ವಿನಯಪೂರ್ವಕವಾಗಿ ಸ್ವಾಮೀಜಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮದು ಸಂಪದ್ಭರಿತವಾದ ರಾಜ್ಯವಾಗಿತ್ತು. ಲೂಟಿಕೋರರು ರಾಜ್ಯದ ಸಂಪತ್ತನ್ನು ಲೂಟಿ ಮಾಡಿದರು. ಈಗ ಅತೀ ಭ್ರಷ್ಟ ರಾಜ್ಯವೆಂಬ ಹೆಸರು ಬಂದಿದೆ. ಅಸಂಸ್ಕೃತರು ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದಾರೆ. ಅದಕ್ಕಾಗಿ ರಾಜ್ಯದ ಪರಿಸ್ಥಿತಿ ಈ ರೀತಿ ಇದೆ. ಹೀಗಾಗಿ ಧರ್ಮ ಗುರುಗಳು ಸರ್ವೆ ಜನೋ ಸುಖೀನಾ ಭವಂತು ಎಂದು ಎಲ್ಲಾ ಕಡೆ ಹೇಳಬೇಕು. ಸರ್ವ ಸಂಘ ಪರಿತ್ಯಾಗಿಗಳಾಗಿರಬೇಕು. ಇಡೀ ಸಮಾಜವನ್ನು ಧರ್ಮ, ನ್ಯಾಯ, ಸತ್ಯದ ಹಾದಿಯಲ್ಲಿ ನಡೆಸಲು ಮಾರ್ಗದರ್ಶನ ನೀಡಬೇಕೆಂದು ಹೇಳಿದರು.

ಸಮಾಜದ ವಿವಿಧ ಜಾತಿ, ಧರ್ಮವನ್ನು ಮಠಗಳು ಬೆಸೆಯುವುದು ಧರ್ಮ ಗುರುಗಳ ಕೆಲಸ. ಭಿನ್ನ-ಭೇದಗಳಿಗೆ ಮದ್ದು, ಮುಲಾಮು ಹಚ್ಚುವ ಕೆಲಸ ಅವರು ಮಾಡಬೇಕಿತ್ತು. ಅದನ್ನು ಬಿಟ್ಟು ಸರ್ಕಾರದ ಮುಖ್ಯಸ್ಥರು ಯಾರಾಗಬೇಕು, ಯಾರು ಆಗಬಾರದೆಂದು ಮಠಾಧೀಶರು ಜಾತಿ ಕೇಂದ್ರಿತವಾಗಿ ಹೇಳಿಕೆ ನೀಡುತ್ತಾ ಹೋದರೆ ಸಾಮಾಜಿಕ ಸಾಮರಸ್ಯ ಹದಗೆಡಲಿದೆ. ಮಠಾಧೀಶರ ಸಾಂಘಿಕ ಶಕ್ತಿಯು ರಚನಾತ್ಮಕ ಕಾರ್ಯಗಳ ಬಳಕೆಯಾಗಲಿ. ಎಲ್ಲಾ ಸ್ವಾಮೀಜಿಗಳು ಒಗ್ಗೂಡಿ ಪರಿಸರ ಸಂರಕ್ಷಣಾ ಅಭಿಯಾನ ಪ್ರಾರಂಭಿಸಲಿ ಎಂದು ಮನವಿ ಮಾಡಿದರು.

**ಜಾಗತಿಕ ತಾಪಮಾನ ಏರಿಕೆ**

ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಪರಿಣಾಮ ಜಗತ್ತಿನಾದ್ಯಂತ ವ್ಯಾಪಕ

» ನಾಲ್ಕನೇ ಪುಟದಲ್ಲಿ




### ಪರಿಸರ ನಾಶಕ್ಕೆ ಸರ್ಕಾರಗಳೇ ಕಾರಣ

ಪರಿಸರ ವಿನಾಶಕ್ಕೆ ಸರ್ಕಾರಗಳೇ ಕಾರಣವಾಗುತ್ತಿವೆ. ಪರಿಸರ ಸಂರಕ್ಷಣೆ ಕೇವಲ ಭಾಷಣಗಳು ಮತ್ತು ಘೋಷಣೆಗಳಲ್ಲಿ ಮಾತ್ರ ಇವೆ. ಪಶ್ಚಿಮಘಟ್ಟದಲ್ಲಿ ಈಗಾಗಲೇ ಎತ್ತಿನಹೊಳೆ ತಿರುವು ಯೋಜನೆ ಹಾಗು ಅನೇಕ ಜಲವಿದ್ಯುತ್ ಘಟಕಗಳನ್ನು ಸ್ಥಾಪಿಸಿ ದಟ್ಟಾರಣ್ಯವನ್ನು ಛಿದ್ರಗೊಳಿಸಲಾಗಿದೆ. ಇದರ ಪರಿಣಾಮವಾಗಿ ವನ್ಯಜೀವಿಗಳು ನಾಡಿಗೆ ನುಗ್ಗಿ ಅನಾಹುತ ಸೃಷ್ಟಿಸುತ್ತಿವೆ. ಮಾನವ-ವನ್ಯಜೀವಿ ಸಂಘರ್ಷ ತಾರಕಕ್ಕೇರಿದೆ ಎಂದು ಎ.ಟಿ.ರಾಮಸ್ವಾಮಿ ಅವರು ದೂರಿದರು.

# ಇಂದಿನಿಂದ ಆದಿಚುಂಚನಗಿರಿ ಕ್ರೀಡಾಕೂಟ

• ಪ್ರಜೋದಯ ವರದಿ

**ಹಾಸನ:** ರಾಜ್ಯಮಟ್ಟದ ಆದಿಚುಂಚನಗಿರಿ ಕ್ರೀಡಾಕೂಟ ಗುರುವಾರ ಮತ್ತು ಶುಕ್ರವಾರ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಗುರುವಾರ ಬೆಳಿಗ್ಗೆ 9 ಗಂಟೆಗೆ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ನಗರದ ಕಲಾಭವನದಿಂದ ಸಾಲಗಾಮೆ ರಸ್ತೆ ಮೂಲಕ ಜಿಲ್ಲಾ ಕ್ರೀಡಾಂಗಣಕ್ಕೆ ಕ್ರೀಡಾಜ್ಯೋತಿ ತಲುಪಲಿದೆ. ಸಂಜೆ 6 ಗಂಟೆಗೆ ನಗರದ ಆದಿಚುಂಚನಗಿರಿ ಆಂಗ್ಲಮಾಧ್ಯಮ ಶಾಲೆ ಆವರಣದಲ್ಲಿ ಬಿಜಿಎಸ್ ಸಂಭ್ರಮ ನಡೆಯಲಿದೆ. ಅತಿಥಿಗಳಾಗಿ ರಾಷ್ಟ್ರೀಯ ಅಥ್ಲೆಟ್ ಪೂನಂ ಬೆಳ್ಳಿಯಪ್ಪ, ಹೈ ಜಂಪ್ ಸಾಧಕ ಹರ್ಷಿತ್, ಇಂಚರಾ ಮೊದಲಾದವರು ಭಾಗಿಯಾಗಲಿದ್ದಾರೆ.

# ಡಿ.06 ರಂದು ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶ

• ಪ್ರಜೋದಯ ವರದಿ

**ಹಾಸನ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವತಿಯಿಂದ ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶ, ಕಂದಾಯ ಇಲಾಖೆಯ ದರಖಾಸ್ತು ಪೋಡಿ, ಪೌತಿ ಖಾತೆ, ಕಂದಾಯ ಗ್ರಾಮ, 94ಸಿ ಹಕ್ಕುಪತ್ರಗಳ ವಿತರಣೆ ಹಾಗೂ ವಿವಿಧ ಇಲಾಖೆಗಳ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನಾ ಕಾರ್ಯಕ್ರಮವನ್ನು ಡಿ.06 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಆವರಣದಲ್ಲಿ ಏರ್ಪಡಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಮಾಡಲಿದ್ದಾರೆ. ಉಪ ಮುಖ್ಯಂತ್ರಿ ಡಿ.ಕೆ.ಶಿವಕುಮಾರ್ ಅವರು ಘನ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಸಚಿವರಾದ ಡಾ.ಜಿ.ಪರಮೇಶ್ವರ್, ಹೆಚ್.ಕೆ ಪಾಟೀಲ್, ದಿನೇಶ್ ಗುಂಡೂರಾವ್, ಡಾ. ಹೆಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಬಿ. ಜೆಡ್.ಜಮೀರ್ ಅಹಮದ್‌ಖಾನ್, ಎನ್. ಚಲುವರಾಯಸ್ವಾಮಿ, ರಹೀಂ ಖಾನ್, ಶರಣ ಪ್ರಕಾಶ್ ಪಾಟೀಲ್, ಕೆ. ವೆಂಕಟೇಶ್, ಶಿವರಾಜ್ ಎಸ್. ತಂಗಡಗಿ, ಮಧು ಬಂಗಾರಪ್ಪ ಹಾಗು ಕರ್ನಾಟಕ ಗೃಹಮಂಡಳಿ ಅಧ್ಯಕ್ಷರೂ ಆದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಉಪಸ್ಥಿತಿ ವಹಿಸಲಿರುವರು.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್, ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಶಾಸಕರಾದ ಡಾ.ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಹೆಚ್.ಪಿ.ಸ್ವರೂಪ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಣ್ಣ ಮತ್ತಿತರರು ಭಾಗವಹಿಸಲಿದ್ದಾರೆ.

# ಡಿ.6 ರಂದು ಅಂಬೇಡ್ಕರ್ ಪರಿ ನಿರ್ವಾಣ ದಿನ

• ಪ್ರಜೋದಯ ವರದಿ

**ಹಾಸನ :** ಡಾ|| ಬಿ.ಆರ್.ಅಂಬೇಡ್ಕರ್‌ರವರ 69ನೇ ಪರಿ ನಿರ್ವಾಣ ದಿನದ ಪ್ರಯುಕ್ತ ಡಿ.6 ರಂದು ಬೆಳಿಗ್ಗೆ 09 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಅಂಬೇಡ್ಕರ್‌ರವರ ಪ್ರತಿಮೆಗೆ ಮಾಲಾರ್ಪಣೆ ಕಾರ್ಯ ಕ್ರಮ ಏರ್ಪಡಿಸಲಾಗಿದೆ. ಎಲ್ಲಾ ಜನಪ್ರತಿನಿಧಿಗಳು, ಅಧಿಕಾರಿಗಳು, ನೌಕರರು, ಪ.ಜಾತಿ-ವರ್ಗದ ಮತ್ತು ಸಂಘ-ಸಂಸ್ಥೆಗಳ ಮುಖಂಡರು ಭಾಗವಹಿಸಲು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಕೋರಿದ್ದಾರೆ.

# ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್‌ಗೆ ಸಿಮೆಂಟ್ ಮಂಜು ಆಗ್ರಹ

## ಹೋಂಸ್ಟೇ, ರೆಸಾರ್ಟ್‌ಗಳಿಂದ ವ್ಯಾಪಾರ ವಹಿವಾಟು ವೃದ್ಧಿ




• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನಲ್ಲಿರುವ ಹೋಂ ಸ್ಟೇ ಹಾಗು ರೆಸಾರ್ಟ್‌ಗಳಿಂದ ತಿಂಗಳಿಗೆ ಸುಮಾರು 15 ಕೋ.ರೂ. ಹೆಚ್ಚು ವ್ಯಾಪಾರ ವಹಿವಾಟು ನಡೆಯುತ್ತಿರುವುದರಿಂದ ಸರ್ಕಾರ ಇಲ್ಲಿಯ ರಸ್ತೆ ಸೇರಿ ಮೂಲ ಸೌಲಭ್ಯಗಳಿಗೆ ಪ್ರತಿ ವರ್ಷ ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಒತ್ತಾಯಿಸಿದರು.

ತಾಲ್ಲೂಕು ಹೋಂ ಸ್ಟೇ ಮಾಲೀಕರ ಸಂಘದಿಂದ ಬುಧವಾರ ಕೂಡುರಸ್ತೆ ಗ್ರಾಮದ ಬಿಸಿಲೆ ಹೋಂ ಸ್ಟೇನಲ್ಲಿ ಹೋಂ ಸ್ಟೇ ಮಾಲೀಕರ ಸಂಘದ-2026ರ ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಕಲೇಶಪುರ ಪಶ್ಚಿಮಘಟ್ಟದ ಮಲೆನಾಡಿನ ನಿತ್ಯ ಹರಿದ್ವರ್ಣ ಕಾಡುಗಳು, ಬೆಟ್ಟಗುಡ್ಡಗಳ ನೈಸರ್ಗಿಕ ಸೌಂದರ್ಯ ಹೊಂದಿದೆ. ಅದನ್ನು ನೋಡಿ ಆನಂದಿ ಸಲು ಪ್ರವಾಸಿಗರು ಬರುತ್ತಾರೆ. ಪ್ರವಾಸಿಗರನ್ನು ಆಕರ್ಷಣೆ ಮಾಡಲು ಸರ್ಕಾರ ಹಣ ಖರ್ಚು ಮಾಡ ಬೇಕಾಗಿಲ್ಲ. ನಿಸರ್ಗದತ್ತವಾಗಿರುವ ಪ್ರವಾಸಿ ತಾಣಗಳಿಗೆ ಚತುಸ್ಪಥ ರಸ್ತೆ, ವಾಹನಗಳ ನಿಲ್ಲುಗಡೆ, ಹೈಟೆಕ್ ಶೌಚಾಲಯಗಳ ವ್ಯವಸ್ಥೆಗಳನ್ನಷ್ಟೇ ಮಾಡಿದರೆ ಸಾಕು ಇನ್ನು ಹೆಚ್ಚಿನ ಪ್ರವಾಸಿಗರು ಬರುತ್ತಾರೆ. ಅದರಿಂದ ಆರ್ಥಿಕ ವಹಿವಾಟು ಹೆಚ್ಚಾಗಿ ಸರ್ಕಾರಕ್ಕೆ ಹೆಚ್ಚು ಆದಾಯ ಹರಿದು ಬರುತ್ತದೆ ಎಂದರು.

ತಾಲ್ಲೂಕಿಗೆ ಪ್ರವಾಸಿಗರು ಹೆಚ್ಚು ಹೆಚ್ಚು ಬಂದಷ್ಟೂ ಈ ಭಾಗದ ಆರ್ಥಿಕ

» ನಾಲ್ಕನೇ ಪುಟದಲ್ಲಿ

## 501 ಮಕ್ಕಳ ಹಾಜರಾತಿ ಮೂಲಕ ಜಿಲ್ಲೆಗೆ ಪ್ರಥಮ | ಮೈಸೂರು ಮಹಾರಾಜರ ಕೊಡುಗೆ

# ಶತಮಾನೋತ್ತರ ರಜತ ಸಂಭ್ರಮದಲ್ಲಿ ವಾಣಿ ವಿಲಾಸ ಶಾಲೆ

• ಪ್ರಜೋದಯ ವರದಿ

**ಹಾಸನ:** ಮೂಲಸೌಲಭ್ಯ ಹಾಗು ದಾಖಲಾತಿ ಕೊರತೆಯಿಂದ ಸರ್ಕಾರಿ ಶಾಲೆಗಳ ಮುಚ್ಚುವ ಸುದ್ದಿಯೇ ಹೆಚ್ಚುತ್ತಿರುವ ಪ್ರಸ್ತುತ ದಿನಗಳಲ್ಲಿ ನಗರದ ವಾಣಿ ವಿಲಾಸ ಸರ್ಕಾರಿ ಪ್ರಾಥಮಿಕ ಶಾಲೆ 501 ವಿದ್ಯಾರ್ಥಿಗಳ ಹಾಜರಾತಿ ಹೊಂದಿರುವುದಲ್ಲದೆ 125ನೇ ವರ್ಷಾಚರಣೆಯ ಸಂಭ್ರಮದಲ್ಲಿದೆ.

ಶತಮಾನೋತ್ತರ ರಜತ ಮಹೋತ್ಸವದಲ್ಲಿರುವ ಶಿಕ್ಷಕರು ಸಂಭ್ರಮದ ಸವಿ ನೆನಪಿಗಾಗಿ ಡಿ. 5ರ ಶುಕ್ರವಾರ ವಾಣಿ ವಿಲಾಸೋತ್ಸವವನ್ನು ಹಮ್ಮಿಕೊಂಡಿದ್ದಾರೆ. ಹಾಸನಾಂಬ ಕಲಾಕ್ಷೇತ್ರದಲ್ಲಿ ಅಂದು ಮಧ್ಯಾಹ್ನ 3 ಗಂಟೆಗೆ ಸಮಾರಂಭ ಹಮ್ಮಿಕೊಂಡಿದ್ದು, ಹಳೆಯ ವಿದ್ಯಾರ್ಥಿಗಳು ಹಾಗು ಶಿಕ್ಷಕರು ಸಾಕ್ಷಿಯಾಗಲಿದ್ದಾರೆ.

ಸರ್ಕಾರಿ ಶಾಲೆಗಳು ಒಂದರ ನಂತರ ಮತ್ತೊಂದು ಮುಚ್ಚುತ್ತಿರುವ ಸವಾಲಿನ ಸಮಯದಲ್ಲಿ 501 ವಿದ್ಯಾರ್ಥಿಗಳೊಂದಿಗೆ ಶಾಲೆ ಅಸ್ತಿತ್ವ ಉಳಿಸಿಕೊಂಡಿರುವುದು ಅದರ ಶೈಕ್ಷಣಿಕ ಮಟ್ಟ, ಗುರುಗಳ ನಿಷ್ಠೆ ಮತ್ತು ಸಾರ್ವಜನಿಕರ ಭರವಸೆಯ ನಿಜವಾದ ಪ್ರತೀಕ. ಅನೇಕ ವಿದ್ಯಾರ್ಥಿಗಳ ಕನಸುಗಳು ಇಲ್ಲಿ ಮೊದಲ ಬಾರಿಗೆ ರೂಪ ಪಡೆದಿವೆ. ಅನೇಕ ಕುಟುಂಬಗಳ ಭವಿಷ್ಯ ಇಲ್ಲಿ ಬೆಳಗಿದೆ, ಅನೇಕ ಗುರುಗಳ ಸೇವಾಭಾವ ಇತಿಹಾಸ ನಿರ್ಮಿಸಿದೆ.



ಈ ಶಾಲೆ ಕೇವಲ ಪಠ್ಯ ಪುಸ್ತಕಗಳ ಜ್ಞಾನ ನೀಡುವ ಸ್ಥಳವಲ್ಲ, ಬದುಕಿನ ಮೌಲ್ಯ, ಸಂಸ್ಕಾರ, ಒಗ್ಗಟ್ಟನ್ನು ಕಲಿಸುವ ಅಕ್ಕರೆಯ ಮನೆ. ಹಳ್ಳಿಗಳಿಂದ ನಗರದವರೆಗೂ, ಬಡವರಿಂದ ಮಧ್ಯಮ ವರ್ಗದವರೆಗೂ ಶಿಕ್ಷಣದ ಸಮಾನ ಅವಕಾಶ ನೀಡಿರುವುದು ಶಾಲೆಯ ದೊಡ್ಡ ಪರಂಪರೆ.

ಹಾಸನದಲ್ಲಿ ವಾಣಿ ವಿಲಾಸ ಶಾಲೆ ಆರಂಭಿಸಿದ್ದು ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್. ಅವರ ತಾಯಿ ವಾಣಿವಿಲಾಸ ರಾಣಿ ಕೆಂಪರಾಜಮ್ಮಣ್ಣಿಯವರ ಸಲಹೆ ಹಾಗು ಮಾರ್ಗದರ್ಶನದ ಮೇರೆಗೆ 1901ರಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವ ಉದ್ದೇಶದಿಂದ ಪ್ರಾರಂಭಿಸಲಾಯಿತು. ಬೇರೆ ಯಾವುದೋ ಉದ್ದೇಶಕ್ಕೆ ನಿರ್ಮಿಸಲಾಗಿದ್ದ ಕಟ್ಟಡವನ್ನು ಹೆಣ್ಣು ಮಕ್ಕಳ ಶಾಲೆಯಾಗಿ ಪರಿವರ್ತಿಸಲಾಯಿತು. ಇಂದಿಗೂ ಅದೇ ಕಟ್ಟಡದಲ್ಲಿ ಮಕ್ಕಳಿಗೆ ಪಠ್ಯ ಬೋಧನೆ ಮುಂದುವರಿದಿದೆ. ರಂಗಭೂಮಿ ಚಟುವಟಿಕೆ ಅಥವಾ ಸಾರ್ವಜನಿಕ ಸಮಾರಂಭಕ್ಕಾಗಿ ನಿರ್ಮಿಸಿದ ವೇದಿಕೆಯ ರೂಪದಲ್ಲಿ ಕಟ್ಟಡವಿದ್ದು, ಮಹಾರಾಜರ ಕೊಡುಗೆಯ ಸ್ಮರಣಾರ್ಥ ಕಟ್ಟಡವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಆ ಅವಧಿಯಲ್ಲಿ ಮೈಸೂರು, ಹಾಸನ ಹಾಗು ಬೆಂಗಳೂರಿನಲ್ಲಿ ವಾಣಿವಿಲಾಸ ಹೆಸರಿನಲ್ಲಿ ಮಹಿಳಾ ಶಿಕ್ಷಣ ಕೇಂದ್ರ ಆರಂಭಿಸಲಾಯಿತು.

**ಜಿಲ್ಲೆಯಲ್ಲೇ ಅತ್ಯಧಿಕ ದಾಖಲಾತಿ**

ಜಿಲ್ಲೆಯ ಸರ್ಕಾರಿ ಶಾಲೆಗಳಿಗೆ ಹೋಲಿಸಿದರೆ ದಾಖಲಾತಿಯಲ್ಲಿ ಈ ಶಾಲೆ ಮೊದಲ ಸ್ಥಾನದಲ್ಲಿದೆ. ಪಠ್ಯ ಹಾಗು ಪಠ್ಯೇತರ ಚಟುವಟಿಕೆಗಳ ಮೂಲಕ ಗುಣಮಟ್ಟದ ಶಿಕ್ಷಣವನ್ನು ಇಲ್ಲಿ ನೀಡಲಾಗುತ್ತಿದೆ. ಕನ್ನಡ ಹಾಗು ಇಂಗ್ಲೀಷ್ ಮಾಧ್ಯಮಗಳಲ್ಲಿ ತರಗತಿಗಳು ನಡೆಯುತ್ತಿದ್ದು, ಕಂಪ್ಯೂಟರ್, ಸಂಗೀತ, ವ್ಯಾಯಾಮ, ಕ್ರೀಡೆ ಹೀಗೆ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗಿದೆ. ಒಟ್ಟು 21 ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

> ಹಾಸನದ ವಾಣಿ ವಿಲಾಸ ಸರ್ಕಾರಿ ಶಾಲೆ 125 ವರ್ಷಗಳನ್ನು ಪೂರೈಸಿರುವುದು ಹೆಮ್ಮೆಯ ವಿಷಯ. ನಮ್ಮಲ್ಲಿ ಎಲ್ಲಾ ವಿಷಯಕ್ಕೆ ನುರಿತ ಶಿಕ್ಷಕರಿದ್ದು, ಪೋಷಕರು ತಮ್ಮ ಮಕ್ಕಳನ್ನು ಇಲ್ಲಿಗೆ ಸೇರಿಸಲು ಉತ್ಸುಕತೆ ತೋರುತ್ತಾರೆ. ಪೂರ್ವ ಪ್ರಾಥಮಿಕ ತರಗತಿಗೆ ಇಂಗ್ಲಿಷ್ ಮೀಡಿಯಂ ಅಳವಡಿಸಿಕೊಂಡಿರುವುದ ರಿಂದ ದಾಖಲಾತಿ ಹೆಚ್ಚಿದೆ.
> -ಎಂ.ಹೆಚ್.ಮೀನಾಕ್ಷಿ, ಮುಖ್ಯ ಶಿಕ್ಷಕಿ

**ಖಾಸಗಿ ಶಾಲೆಗಳೊಂದಿಗೆ ಪೈಪೋಟಿ**

ನಗರದ ಹೃದಯ ಭಾಗದಲ್ಲಿರುವ ವಾಣಿ ವಿಲಾಸ ಸರ್ಕಾರಿ ಶಾಲೆ ದಶಕಗಳಿಂದ ಮಕ್ಕಳ ಹಾಜರಾತಿಯಲ್ಲಿ ಏರಿಕೆ ಕಾಪಾಡಿಕೊಂಡು ಬರುತ್ತಿದ್ದು, ಖಾಸಗಿ ಶಾಲೆಗಳ ಜೊತೆಗಿನ ಪೈಪೋಟಿಯಲ್ಲಿ ಮೇಲುಗೈ ಸಾಧಿಸುತ್ತಿರುವುದನ್ನು ಕಾಣಬಹುದು. ನಗರದಲ್ಲಿ ಬಡಾವಣೆಗೊಂದರಂತೆ ಖಾಸಗಿ ಶಿಕ್ಷಣ ಸಂಸ್ಥೆಗಳಿವೆ. ಆದರೂ ಪೋಷಕರು ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುತ್ತಿದ್ದಾರೆಂದರೆ ಅದಕ್ಕೆ ಇಲ್ಲಿನ ಶಿಕ್ಷಕರ ಬೋಧನಾ ಕೌಶಲವೇ ಕಾರಣ. ಪ್ರತಿಭಾ ಕಾರಂಜಿ, ವಾರ್ಷಿಕ ಕ್ರೀಡಾಕೂಟ ಸೇರಿ ಇನ್ನಿತರ ಚಟುವಟಿಕೆಗಳಲ್ಲಿ ಮಕ್ಕಳು ಪ್ರಶಸ್ತಿ ಗಳಿಸುತ್ತಿರುವುದು ಖಾಸಗಿ ಸಂಸ್ಥೆಗಳು ಸಹ ಹುಬ್ಬೇರುವಂತೆ ಮಾಡಿದೆ.

### ಮನೆ-ಮನೆಗೆ ಭೇಟಿ ನೀಡಿದ್ದ ಶಿಕ್ಷಕರು

ಸರ್ಕಾರಿ ಶಾಲೆಯಲ್ಲಿ ಎಲ್ಲಾ ಸೌಲಭ್ಯಗಳಿದ್ದು, ತಮ್ಮ ಮಕ್ಕಳನ್ನು ಕಳುಹಿಸಿಕೊಡಿ ಎಂದು ಎಷ್ಟೇ ಹೇಳಿದರೂ ಪೋಷಕರು ಅದಕ್ಕೆ ಒಪ್ಪಿರಲಿಲ್ಲ. ಇನ್ನು ಇದೇ ಪರಿಸ್ಥಿತಿ ಮುಂದು ವರಿದರೆ ಶಾಲೆ ಮುಚ್ಚಬೇಕಾಗುತ್ತದೆಂದು ಶಿಕ್ಷಕರು ದಶಕಗಳ ಹಿಂದೆ ಮನೆ ಮನೆಗೆ ತೆರಳಿ ಬಿತ್ತಿಪತ್ರ ವಿತರಿಸಿ ಸರ್ಕಾರಿ ಶಾಲೆಯ ಪ್ರಯೋಜನ ಹೇಳಿಕೊಟ್ಟಿದ್ದರು. ಶಿಕ್ಷಕರಾಗಿದ್ದ ಉಮೇಶ್, ಸರೋಜಮ್ಮ, ಲಕ್ಷ್ಮೀ, ಮೀನಾಕ್ಷಿ, ಮಂಜೇಗೌಡ ಅವರು ಪೋಷಕರನ್ನು ಖುದ್ದಾಗಿ ಭೇಟಿ ನೀಡಿ ಮನವರಿಕೆ ಮಾಡಿದ್ದರು. ಶೈಕ್ಷಣಿಕ ಪ್ರವಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗು ದಾನಿಗಳ ಸಹಕಾರದಿಂದ ಸವಲತ್ತುಗಳನ್ನು ಹೊಂದಿರುವುದು ಶಾಲೆಯ ಉಳಿವಿಗೆ ಕಾರಣವಾಗಿದೆ.

# ಅವ್ಯವಸ್ಥೆಯ ಆಗರ ಹೊನ್ನಮಾರನಹಳ್ಳಿ ಗ್ರಾಮ

## ತಲೆ ಕೆಡಿಸಿಕೊಳ್ಳದ ಅಧಿಕಾರಿಗಳು | ಅಭಿವೃದ್ಧಿ ಮರೀಚಿಕೆ

-ಆರ್.ಶ್ರೀನಿವಾಸ್ ಉಳ್ಳಾವಳ್ಳಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಸ್ತೆ ಹಾಗು ಚರಂಡಿ, ಬೀದಿ ದೀಪಗಳಿಲ್ಲ. ದಶಕ ಕಳೆದರೂ ಸಮುದಾಯ ಭವನದ ಕಾಮಗಾರಿ ಪೂರ್ಣಗೊಂಡಿಲ್ಲ, ಸಾರಿಗೆ ಸಂಪರ್ಕವೂ ಇಲ್ಲ ಹೀಗೆ ಹತ್ತು ಹಲವಾರು ಸಮಸ್ಯೆಗಳ ಆಗರವಾಗಿದೆ ತಾಲ್ಲೂಕಿನ ಹೊನ್ನಮಾರನಹಳ್ಳಿ ಗ್ರಾಮ.

ನುಗ್ಗೇಹಳ್ಳಿ-ಬಾಗೂರು ಮಾರ್ಗದಲ್ಲಿರುವ ಈ ಗ್ರಾಮ 250 ಮನೆ ಹಾಗು 1150ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದೆ. ಹೋಬಳಿ ಕೇಂದ್ರ ನುಗ್ಗೇಹಳ್ಳಿಯಿಂದ ಕೂಗಳತೆ ದೂರದಲ್ಲಿದ್ದರೂ ಸೌಲಭ್ಯಗಳಿಲ್ಲದೆ ನರಳುತ್ತಿಯೆಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಮೂರು ಗ್ರಾಮ ಪಂಚಾಯಿತಿ ಸದಸ್ಯರನ್ನು ಗ್ರಾಮ ಒಳಗೊಂಡಿದೆ. ಆದರೂ ಅಭಿವೃದ್ಧಿ ಎನ್ನುವುದು ಮರೀಚಿಕೆಯಾಗಿದೆ. ಗ್ರಾಮದ ಕೆಲ ಬೀದಿಗಳಿಗೆ ರಸ್ತೆ ನಿರ್ಮಾಣವಾಗಿಲ್ಲ. ಕೆಲವೆಡೆ ಚರಂಡಿಗಳಿದ್ದರೂ ಗಿಡ ಗಂಟಿಗಳು ಬೆಳೆದಿದ್ದು ತ್ಯಾಜ್ಯದಿಂದ ತುಂಬಿ ಹೋಗಿವೆ. ಬಹುತೇಕ ಬೀದಿಗಳಲ್ಲಿ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಮನೆ ಬಳಕೆ ಹಾಗು ಮಳೆ ನೀರು ಹರಿದು ಮುಖ್ಯ ರಸ್ತೆಯ ಮಧ್ಯೆಯೇ ಸಂಗ್ರಹವಾಗುತ್ತಿದೆ.

ಮುಖ್ಯ ರಸ್ತೆ ಸಂಪೂರ್ಣ ಗುಂಡಿಮಯವಾಗಿ ಕೊಳಚೆ ನೀರು ಸಂಗ್ರಹವಾಗಿ ಕೆಸರು ಗದ್ದೆ ಯಂತಾಗಿದೆ. ಪರಿಣಾಮ ಸಾರ್ವಜನಿಕರು ಹಾಗು ವಾಹನಗಳು ಸಂಚರಿಸಲಾಗದಷ್ಟು ಅವ್ಯವಸ್ಥೆ ಸೃಷ್ಟಿಯಾಗಿದೆ. ರಸ್ತೆ ಮಧ್ಯೆ ಕೊಳಚೆ ನೀರು ಸಂಗ್ರಹಗೊಂಡಿರುವ ಕಾರಣ



ವಾಹನ ಸಂಚಾರಕ್ಕೆ ಹರಸಾಹಸ ಪಡಬೇಕಾಗಿದೆ. ರಸ್ತೆ ಮಧ್ಯೆ ಮಾರ್ಪಟ್ಟಿರುವ ಗುಂಡಿಗಳು ಕೊಳಚೆ ತುಂಬಿಕೊಂಡಿರುವುದರಿಂದ ಜನರಿಗೆ ಸರಿಯಾಗಿ ಗೋಚರಿಸದ ಕಾರಣ ಅಪಘಾತಗಳು ಸಂಭವಿಸುತ್ತಿದ್ದು ಮುಖ್ಯ ರಸ್ತೆಯು ಅಪಘಾತ ವಲಯವಾಗಿ ಮಾರ್ಪಟ್ಟಿದೆಯೆಂದು ಗ್ರಾಮಸ್ಥರು ಆರೋಪಿಸಿದ್ದಾರೆ.

**ಸೊಳ್ಳೆಗಳ ಕಾಟ ವಿಪರೀತ:** ಕೆಲವೆಡೆ ಗಿಡ-ಗಂಟಿಗಳು ಬೆಳೆದು ಮಣ್ಣು ಹಾಗು ತ್ಯಾಜ್ಯದಿಂದ ತುಂಬಿರುವ ಚರಂಡಿಗಳನ್ನು ತೆರವುಗೊಳಿಸದ ಕಾರಣ ಅಲ್ಲಲ್ಲಿ ಕೊಳಚೆ ನೀರು ಸಂಗ್ರಹವಾಗಿದೆ. ಅನೈರ್ಮಲ್ಯ ತಾಣವಾಗಿ ಪರಿಣಮಿಸಿದೆ. ಸಂಜೆಯಾದರೆ ಮನೆಗಳಲ್ಲಿ ಸೊಳ್ಳೆಗಳ ಕಾಟ ತೀವ್ರ ವಾಗಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆಯೆಂದು ಗ್ರಾಮದ ಲಕ್ಷ್ಮಮ್ಮ ಆಕ್ರೋಶ ಹೊರಹಾಕಿದರು.

**ಕತ್ತಲೆಯ ಗೂಡಾದ ಗ್ರಾಮ:** ಬೀದಿ ದೀಪಗಳ ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ ಸಂಜೆ ಯಾದರೆ ಗ್ರಾಮವೆಲ್ಲಾ ಕತ್ತಲೆಯ ಗೂಡಾಗುತ್ತದೆ. ಹೀಗಾಗಿ ರಾತ್ರಿ ವೇಳೆ ಸಾರ್ವಜನಿಕರು ತಿರುಗಾಡುವುದೇ ಕಷ್ಟಕರವಾಗಿದೆ. ಇತ್ತೀಚೆಗೆ ಕ್ಷೇತ್ರದ ಶಾಸಕರು ಗ್ರಾಮದ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಡಿ 70 ಲಕ್ಷ ರೂ. ಅನುದಾನ ನೀಡಿದ್ದು ಸಮರ್ಪಕವಾಗಿ ಬಳಕೆಯಾಗದೆ ಕಾಮಗಾರಿಗಳನ್ನು ಸಹ ವೈಜ್ಞಾನಿಕವಾಗಿ ಕೈಗೊಳ್ಳದ ಕಾರಣ ಅನುದಾನವು ವ್ಯರ್ಥವಾಗಿದೆ. ಅನುದಾನವನ್ನು ಬಳಸಿಕೊಂಡು ಕಾಂಕ್ರೀಟ್ ರಸ್ತೆ ನಿರ್ಮಿಸಿದರೂ ಸಹ ಚರಂಡಿ ನಿರ್ಮಿಸದ ಕಾರಣ ಕಾಂಕ್ರೀಟ್ ರಸ್ತೆಯ ಮೇಲೆಯೇ ಮನೆ ಬಳಕೆ ಹಾಗು ಮಳೆ ನೀರು ಮುಖ್ಯ ರಸ್ತೆ ಸೇರುತ್ತಿದೆ. ಅದರಿಂದ ಬಾಗೂರು-ನುಗ್ಗೇಹಳ್ಳಿ ಮುಖ್ಯರಸ್ತೆಯು ಹಾಳಾಗಿದ್ದು ಪ್ರಯಾಣಿಕರು ಹಿಡಿಶಾಪ ಹಾಕುತ್ತಿದ್ದಾರೆ.

**ಕಾಮಗಾರಿ ಪೂರ್ಣಗೊಳ್ಳದ ಭವನ:** ಕಳೆದ 10 ವರ್ಷಗಳ ಹಿಂದೆ ಮದುವೆ ಹಾಗು ಇತರ ಶುಭ ಸಮಾರಂಭಗಳ ಸಲುವಾಗಿ ಸಂಸದರ ನಿಧಿಯಿಂದ 10 ಲಕ್ಷ ರೂ. ಅನುದಾನ ಹಾಗು ಗ್ರಾಮಸ್ಥರ ಸಹಕಾರದೊಂದಿಗೆ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ ಪ್ರಾರಂಭಗೊಂಡಿತ್ತು. 10 ವರ್ಷ ಕಳೆದರೂ ಕಾಮಗಾರಿಯೂ ಪೂರ್ಣಗೊಂಡಿಲ್ಲ. ಅರ್ಧಕ್ಕೆ ಸ್ಥಗಿತಗೊಂಡಿರುವ ಪರಿಣಾಮ ಉದ್ಘಾಟನೆಯ ಭಾಗ್ಯವೂ ಸಹ ಭವನಕ್ಕೆ ಇಲ್ಲದಾಗಿದೆ.

**ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲ:** ಬಾಗೂರು ಹಾಗು ನುಗ್ಗೇಹಳ್ಳಿ ಎರಡು ಗ್ರಾಮಗಳು ಹೋಬಳಿ ಕೇಂದ್ರಗಳಾಗಿದ್ದು ನಡುವೆ ಸೂಕ್ತ ಹಾಗು ವ್ಯವಸ್ಥಿತವಾದ ಸಾರಿಗೆ ಬಸ್ ಸಂಚಾರ ಇಲ್ಲ. ಬೆಳಿಗ್ಗೆ 9 ಹಾಗು ಸಂಜೆ 4.30ರ ಸಮಯದಲ್ಲಿ ಒಂದು ಸಾರಿಗೆ ಬಸ್ ಹೊರತುಪಡಿಸಿದರೆ ಉಳಿದಂತೆ ಬಸ್‌ಗಳ ಸಂಚಾರ ಇಲ್ಲದಾಗಿದೆ. ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಗತ್ಯ ಸಮಯಗಳಲ್ಲಿ ಬಸ್ ಸಂಚಾರ ಪ್ರಾರಂಭವಾಗಬೇಕಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಗಮನಹರಿಸಿ ಗ್ರಾಮದ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಒತ್ತಾಯ ಕೇಳಿಬಂದಿದೆ.

**ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ಮನೆ ಬಳಕೆ ಹಾಗು ಮಳೆ ನೀರು ಮುಖ್ಯ ರಸ್ತೆಗೆ ಹರಿ ಯುತ್ತಿದ್ದು ರಸ್ತೆ ಹಾಳಾಗುವುದರ ಜೊತೆಗೆ ಅಪಘಾತದ ವಲಯವಾಗಿ ಮಾರ್ಪಟ್ಟಿದೆ. ಸೂಕ್ತ ನಿರ್ವಹಣೆ ಇಲ್ಲದ ಪರಿಣಾಮ ಗ್ರಾಮದಲ್ಲಿ ಅನೈರ್ಮಲ್ಯ ತಾಂಡವಾಡುತ್ತಿದ್ದು ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ.**

**-ಹೆಚ್.ಎನ್.ಸುರೇಶ್, ನಿವಾಸಿ**

**ಈಗಾಗಲೇ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಗ್ರಾಮದ 3 ಬೀದಿಗಳ ಕೊಳಚೆ ನೀರು ಹರಿದು ಬಾಗೂರು-ನುಗ್ಗೇಹಳ್ಳಿ ಮುಖ್ಯ ರಸ್ತೆಯ ಮೇಲೆ ಸಂಗ್ರಹವಾಗುತ್ತಿರುವ ಪರಿಣಾಮ ರಸ್ತೆ ಹಾಳಾಗಿದೆ. ಚರಂಡಿಗಳ ನಿರ್ವಹಣೆ ಮಾಡಲು ಗ್ರಾಮ ಪಂಚಾಯಿತಿ ಸದಸ್ಯರಿಗೆ ತಿಳಿಸಲಾಗಿದೆ. ಸದ್ಯದಲ್ಲೇ ಚರಂಡಿ ವ್ಯವಸ್ಥೆಯೊಂದಿಗೆ ಪೈಪ್ ಅಳವಡಿಸುವ ಮೂಲಕ ಸಮಸ್ಯೆ ಬಗೆಹರಿಸಲಾಗುವುದು.**

**-ಮಂಜಣ್ಣಗೌಡ, ಇಂಜಿನೀಯರ್, ಪಿಡಬ್ಲ್ಯೂಡಿ ಚನ್ನರಾಯಪಟ್ಟಣ**

## ಪ್ರಜ್ವಲ್ ಜೀವಾವಧಿ ಶಿಕ್ಷೆ ತಡೆಗೆ ನಕಾರ

### ಜಾಮೀನು ಅರ್ಜಿ ವಜಾಗೊಳಿಸಿ ಹೈಕೋರ್ಟ್ ವಿಭಾಗೀಯ ಪೀಠ ಆದೇಶ

• ಪ್ರಜೋದಯ ವರದಿ



**ಬೆಂಗಳೂರು:** ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಪ್ರಕರಣಕ್ಕೆ ಸಂಬಂಧ ವಿಧಿಸಲಾಗಿರುವ ಜೀವಾವಧಿ ಶಿಕ್ಷೆ ಅಮಾನತ್ತಿನಲ್ಲಿಟ್ಟು, ಜಾಮೀನು ನೀಡುವಂತೆ ಕೋರಿ ಪ್ರಜ್ವಲ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಬುಧವಾರ ವಜಾಗೊಳಿಸಿದೆ.

ಅಪರಾಧದ ಗಂಭೀರತೆ ಮತ್ತು ಬಾಕಿ ಇರುವ ಇತರೆ ಪ್ರಕರಣಗಳ ಮೇಲಿನ ಸಂಭಾವ್ಯ ಪರಿಣಾಮದಿಂದಾಗಿ ಈ ಹಂತದಲ್ಲಿ ಜಾಮೀನು ನೀಡುವುದು ಸೂಕ್ತವಲ್ಲವೆಂದು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಮತ್ತು ನ್ಯಾಯಮೂರ್ತಿ ವೆಂಕಟೇಶ್ ನಾಯಕ್ ಅವರಿದ್ದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ.

ಪ್ರಜ್ವಲ್ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪದ ಮೇಲೆ ಹಲವಾರು ಪ್ರಕರಣಗಳು ದಾಖಲಾಗಿರುವುದನ್ನು ಗಮನಿಸಿದ ಪೀಠ, ಪ್ರಸ್ತುತ ಪ್ರಕರಣದಲ್ಲಿ ದೂರುದಾರರು, ಆರೋಪಿಯ ಉತ್ತಮ ರಾಜಕೀಯ ಮತ್ತು ಆರ್ಥಿಕ ಹಿನ್ನಲೆ ಯಿಂದಾಗಿ ಪೊಲೀಸರನ್ನು ಸಂಪರ್ಕಿಸಲು ವಿಳಂಬ ಮಾಡಿದ್ದಾರೆಂದು ಹೇಳಿದೆ. ಪ್ರಜ್ವಲ್ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಇನ್ನೂ ವಿಚಾರಣೆಯಲ್ಲಿರುವ ಸಂಬಂಧಿತ ಪ್ರಕರಣಗಳಲ್ಲಿ ಸಾಕ್ಷ್ಯಗಳನ್ನು ತಿರುಚುವ ಸಾಧ್ಯತೆ ಇದೆ ಎಂಬ ವಿಶೇಷ ಸಾರ್ವಜನಿಕ ಅಭಿಯೋಜಕರ ವಾದವನ್ನು ಹೈಕೋರ್ಟ್ ಒಪ್ಪಿಕೊಂಡಿದೆ. ಪ್ರಜ್ವಲ್ ಅವರ ವಿರುದ್ಧ ದಾಖಲಾಗಿರುವ ನಾಲ್ಕು ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳಲ್ಲಿ ಒಂದು ಪ್ರಕರಣದಲ್ಲಿ ಕೋರ್ಟ್ ತೀರ್ಪು ಪ್ರಕಟಿಸಿದ್ದು, ಜೀವಾವಧಿ ಶಿಕ್ಷೆ ವಿಧಿಸಿದೆ.

## ಬೇಲೂರು-ಹಾಸನ ಹೆದ್ದಾರಿ ಪರಿಷ್ಕೃತ ಮೊತ್ತಕ್ಕೆ ಸಂಸದರ ಆಗ್ರಹ

• ಪ್ರಜೋದಯ ವರದಿ

**ನವದೆಹಲಿ:** ಬೇಲೂರು-ಹಾಸನ ಮಾರ್ಗದ ರಾಷ್ಟ್ರೀಯ ಹೆದ್ದಾರಿ-373 ಚತುಷ್ಪಥ ಹೆದ್ದಾರಿ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಲೋಕಸಭೆಯಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, ಈ ಯೋಜನೆಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದರೂ, ಪರಿಹಾರ ವಿತರಣೆಯಲ್ಲಿ ವಿಳಂಬವಾಗಿದೆ. ಪ್ರಸ್ತುತ ಕಡತಗಳು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಬೆಂಗಳೂರು ವಲಯ ಕಚೇರಿಯಲ್ಲಿ ಪರಿಶೀಲನಾ ಹಂತದಲ್ಲಿವೆ. ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮತಿ ಬೇಕಾಗಿದೆ ಎಂದು ವಿನಂತಿಸಿದರು.

ಐತಿಹಾಸಿಕ ಹಾಗು ಪ್ರಮುಖ ಪ್ರವಾಸಿ ತಾಣವಾದ ಬೇಲೂರು, ಜಿಲ್ಲಾ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ಮಾರ್ಗವಾಗಿರುವುದರಿಂದ ಈ ಹೆದ್ದಾರಿಯ ಸುಧಾರಣೆ ಅತ್ಯಂತ ಅಗತ್ಯ. ಮುಂಗಾರು ಮಳೆಯಿಂದ ರಸ್ತೆ ಸಂಪೂರ್ಣ ಹದಗೆಟ್ಟಿದೆ. ತ್ವರಿತಗತಿಯಲ್ಲಿ ಸರಕು ಸಾಗಿಸಲು ರಸ್ತೆ ಅಭಿವೃದ್ಧಿ ಅತ್ಯವಶ್ಯಕವಾಗಿದೆ. ವಿಷಯವನ್ನು ಆದ್ಯತೆಯಾಗಿ ಪರಿಗಣಿಸಲು ಹೆದ್ದಾರಿ ಸಚಿವರಿಗೆ ಮನವಿ ಮಾಡಿದರು.

## ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು

**ಹೊಳೆನರಸೀಪುರ:** ಮ್ಯಾಕ್ಸಿಕ್ಯಾಬ್ ಡಿಕ್ಕಿಯಾಗಿ ಗಾಯಗೊಂಡಿದ್ದ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಎಸ್.ಅಂಕನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಾಜೇಗೌಡ ಮೃತರು. ಡಿ.1ರ ರಾತ್ರಿ 11ರ ಸಮಯದಲ್ಲಿ ಬೈಕ್‌ನಲ್ಲಿ ಮನೆಗೆ ಹೋಗುತ್ತಿದ್ದಾಗ ಪೆದ್ದನಹಳ್ಳಿ ಗೇಟ್ ಸಮೀಪ ಎದುರುಗಡೆಯಿಂದ ಬಂದ ಮ್ಯಾಕ್ಸಿಕ್ಯಾಬ್ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಅವರಿಗೆ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಮನೆಗೆ ಕರೆದುಕೊಂಡು ಹೋಗಲಾಗಿತ್ತು. ಡಿ.2ರಂದು ನೋವು ಕಾಣಿಸಿಕೊಂಡ ಹಿನ್ನಲೆಯಲ್ಲಿ ಆಸ್ಪತ್ರೆಗೆ ಕರೆತರಲಾಯಿತಾದರೂ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಾಡ ಹಗಲೇ ಚಿನ್ನಾಭರಣ ಕಳವು

**ಹಾಸನ:** ಹಾಡ ಹಗಲೇ ಮನೆ ಬೀಗ ಮುರಿದು ಒಳನುಗ್ಗಿರುವ ಕಳ್ಳರು 1.45 ಲಕ್ಷ ರೂ. ಬೆಲೆಯ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಕಟ್ಟಾಯ ಗ್ರಾಮದಲ್ಲಿ ನಡೆದಿದೆ.

ನಗರದ ಖಾಸಗಿ ಶಾಲೆಯ ಶಿಕ್ಷಕರಾದ ಗೋಪಾಲಕೃಷ್ಣ ಮತ್ತು ಆಶಾ ಎಂಬುವವರ ಮನೆ ಯಲ್ಲಿ ಕಳ್ಳತನ ನಡೆದಿದೆ. ಡಿ.1ರ ಸಂಜೆ 4 ಗಂಟೆಗೆ ಕೆಲಸ ಮುಗಿಸಿ ಮನೆಗೆ ಹೋದಾಗ ಬಿಗ ಮುರಿದಿರುವುದು ತಿಳಿದಿದೆ. ಬೀರುವಿನಲ್ಲಿಟ್ಟಿದ್ದ 7 ಜೊತೆ ಚಿನ್ನದ ಓಲೆಗಳು, 1 ಒಂದು ಜೊತೆ ಚಿನ್ನದ ಮಾಟಿ, 1 ಚಿನ್ನದ ಉಂಗುರ, 5 ಜೊತೆ ಬೆಳ್ಳಿ ಕಾಲು ಚೈನ್, 2 ಮೊಬೈಲ್ ಮತ್ತು 64 ಸಾವಿರ ರೂ. ನಗದು ಕಳವು ಮಾಡಲಾಗಿದೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಚಿಕ್ಕಕೊಂಡಗೊಳ ಭೂವಿವಾದ ಎಸ್‌ಐಟಿ ತನಿಖೆಗೆ ಆಗ್ರಹ

» ಮೊದಲನೇ ಪುಟದಿಂದ

ದಾಗಿ ಸ್ವತಃ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಭರವಸೆ ನೀಡಿದ್ದರು. ಆದರೆ, ವರ್ಷಗಳೇ ಕಳೆದಿದ್ದರೂ, ಮೂರು ತನಿಖಾ ತಂಡಗಳು ರಚನೆಯಾದವೇ ಹೊರತು, ಲಾಭವಂತೂ ಆಗಲಿಲ್ಲವೆಂದು ದೂರಿದರು.

ಚಿಕ್ಕಕೊಂಡಗೊಳ ಭಾಗದಲ್ಲಿ 1 ಎಕರೆ ಭೂಮಿಗೆ 12 ಕೋ.ರೂ. ಬೆಲೆ ಇದೆ. ಸರ್ಕಾರದ ಆದೇಶ 1977ರ ಪ್ರಕಾರ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದ ಜನರಿಗೆ ಹಂಗಾಮಿ ಸಾಗುವಳಿ ಚೀಟಿಯನ್ನು 9 ಷರತ್ತು ವಿಧಿಸಿ ನೀಡಲಾಗಿದೆ. ಆದರೂ ಷರತ್ತು ಉಲ್ಲಂಘನೆ ಮಾಡಲಾಗಿದೆ. ನಮ್ಮ ಹೋರಾಟ ಸರ್ಕಾರಿ ಭೂಮಿ ಉಳಿಯಬೇಕೆಂಬುದಾಗಿದೆ. ಅದಕ್ಕಾಗಿಯೇ ಜಿಲ್ಲೆಯ ನಾಲ್ಕು ಮಂದಿ ಜೆಡಿಎಸ್ ಶಾಸಕರು, ಕಂದಾಯ ಸಚಿವರಿಗೆ ಲಿಖಿತವಾಗಿ ವರ್ಷದ ಹಿಂದೆ ದೂರು ನೀಡಿದಿದ್ದರೂ ಪ್ರಯೋಜನವಾಗಿಲ್ಲ. ಹೀಗಾಗಿ ಈ ಅಕ್ರಮದ ಬಗ್ಗೆ ತನಿಖೆ ನಡೆಸಲು ಸರ್ಕಾರ ಎಸ್‌ಐಟಿ ರಚಿಸಿ, ಸೂಕ್ತ ತನಿಖೆ ಮಾಡಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹೇಳಿದರು.

ಅಧಿವೇಶನದಲ್ಲಿ ಧ್ವನಿ ಎತ್ತುತ್ತೇವೆ

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಹಾಸನ ಸುತ್ತಮುತ್ತ ರಿಯಲ್ ಎಸ್ಟೇಟ್, ಗಣಿಗಾರಿಕೆಗೆ ಅಕ್ರಮವಾಗಿ ಸರ್ಕಾರಿ ಭೂಮಿ ಮಂಜೂರು ಮಾಡಿರುವ ಬಗ್ಗೆ ಡಿ.8 ರಿಂದ ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ದನಿ ಎತ್ತುವುದಾಗಿ ತಿಳಿಸಿದ ಅವರು, ಕಳೆದ ವರ್ಷ ಚಿಕ್ಕಕೊಂಡಗೊಳ ಬಳಿ ಅನಧಿಕೃತ ಲೇಔಟ್ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತು ಮಾಡುವುದಾಗಿ ಹೇಳಿದ್ದರು. ವರ್ಷ ಕಳೆದರೂ ಆಗಿಲ್ಲವೆಂದು ದೂರಿದರು.

ಎರೆಬರೆ ಕಾವಲು ಬಳಿ ಏಕ ವ್ಯಕ್ತಿಗೆ ಗಣಿಗಾರಿಕೆ ನಡೆಸಲು 10 ಎಕರೆ ಎ ಖರಾಬ್ ಸರ್ಕಾರಿ ಭೂಮಿ ನೀಡಲಾಗಿದೆ. ಈ ಬಗ್ಗೆ ತನಿಖೆ ನಡೆಯಬೇಕೆಂದು ಒತ್ತಾ ಯಿಸಿದರು. ರಿಂಗ್‌ರಸ್ತೆ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿ ರಸ್ತೆ ಮಾಡಲಾಗಿದೆ. ಈ ಬಗ್ಗೆ ಎಡಿಎಲ್‌ಆರ್ ವರದಿ ನೀಡಿದ್ದರೂ, ಕ್ರಮ ಆಗಿಲ್ಲವೆಂದರು.

## ಮಠಾಧೀಶರಿಗೇಕೆ ರಾಜಕೀಯ ಗೊಡವೆ

» ಮೊದಲನೇ ಪುಟದಿಂದ

ವಾಗಿ ಗೋಚರಿಸುತ್ತಿವೆ. ಚಂಡಮಾರುತ, ಅಕಾಲಿಕ ಮಳೆ, ಮೇಘಸ್ಫೋಟ, ಭೂಕುಸಿತ, ಭೂಕಂಪ, ಅನಾವೃಷ್ಟಿ, ಬರಗಾಲ, ಹಿಮಗಡ್ಡೆ ಕರಗುವಿಕೆ ಇತ್ಯಾದಿ ಪ್ರಾಕೃತಿಕ ವಿಕೋಪಗಳು ಪದೇ ಪದೇ ಉಂಟಾಗಿ ಮನುಷ್ಯ ಸೇರಿ ಸಕಲ ಜೀವ ಸಂಕುಲವು ಸಂಕಷ್ಟಕ್ಕೆ ಸಿಲುಕಿವೆ. ಅವುಗಳ ಜೊತೆಗೆ ರಾಜ್ಯದಲ್ಲಿ ಹಲವಾರು ಪರಿಸರ ಸಮಸ್ಯೆಗಳು ಬಿಗಡಾಯಿಸಿ ಜೀವ ಸಂಕುಲದ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿವೆ ಎಂದು ದೂರಿದರು.

ರಾಜ್ಯದ ಬಹುತೇಕ ನದಿಗಳು ಕಲುಷಿತಗೊಂಡಿವೆ. ಅವುಗಳ ನೀರು ಕುಡಿಯಲು ಯೋಗ್ಯವಾಗಿಲ್ಲ. ಕೆಲವು ನದಿಗಳ ನೀರು ಬಳಕೆಗೂ ಯೋಗ್ಯವಾಗಿಲ್ಲವೆಂಬ ವೈಜ್ಞಾನಿಕ ವರದಿಗಳು ಬಂದಿವೆ. ಕಾಡಿನಲ್ಲಿ ಮತ್ತು ನಾಡಿನಲ್ಲಿ ಮರಗಳನ್ನು ನಿರಂತರವಾಗಿ ಕಡಿಯಲಾಗುತ್ತಿದ್ದು, ಹಸಿರು ಹೊದಿಕೆ ಕಡಿಮೆಯಾಗುತ್ತಿದೆ. ಗಣಿಗಾರಿಕೆ, ಹೋಮ್ ಸ್ಟೇ ಮತ್ತು ರೆಸಾರ್ಟ್ ನಿರ್ಮಾಣ ಇತ್ಯಾದಿ ಕಾರಣಗಳಿಂದ ಬೆಟ್ಟ-ಗುಡ್ಡಗಳು ಕರಗುತ್ತಿವೆ. ಕೃಷಿಯಲ್ಲಿ ವಿಪರೀತ ರಾಸಾಯನಿಕಗಳು, ಕ್ರಿಮಿನಾಶಕಗಳ ಬಳಕೆಯಿಂದ ಮಣ್ಣು, ನೀರು ಮತ್ತು ಆಹಾರ ವಿಷಯುಕ್ತವಾಗುತ್ತಿದೆ. ಮಿತಿ ಮೀರಿದ ಕೊಳವೆ ಬಾವಿಗಳ ಕಾರಣದಿಂದ ಅಂತರ್ಜಲ ಮಟ್ಟ ಪಾತಾಳ ಮುಟ್ಟಿದೆ. ಈ ಬಗ್ಗೆ ನಾವೆಲ್ಲರೂ ಚಿಂತಿಸುವುದು ಅತೀ ತುರ್ತಾಗಿದೆ ಎಂದು ಹೇಳಿದರು.

ಪಶ್ಚಿಮ ಘಟ್ಟಗಳನ್ನು ಮಳೆ ಕಾಡುಗಳು ಮತ್ತು ದಕ್ಷಿಣ ಭಾರತದ ಜಲಗೋಪುರ ಎಂದು ಕರೆಯಲಾಗುತ್ತದೆ. ದಕ್ಷಿಣ ಭಾರತದ ಬಹುತೇಕ ನದಿಗಳು ಹುಟ್ಟುವುದು ಇಲ್ಲಿಯೇ. ಯುನೆಸ್ಕೋ ಈ ಘಟ್ಟಗಳನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರಿಸಿದೆ. ಪಶ್ಚಿಮ ಘಟ್ಟಗಳು ಜಗತ್ತಿನ ಜೀವವೈವಿಧ್ಯತೆಯ ಹಾಟ್ ಸ್ಪಾಟ್. ಒಟ್ಟಾರೆ ಪಶ್ಚಿಮ ಘಟ್ಟಗಳು ದೇಶದ ಅತ್ಯಮೂಲ್ಯ ನೈಸರ್ಗಿಕ ಸಂಪತ್ತನ್ನು ಸಂರಕ್ಷಣೆ ಮಾಡುವ ಕೆಲಸವಾಗಬೇಕೆಂದು ಒತ್ತಾಯಿಸಿದರು.

ಹಿರಿಯ ಪತ್ರಕರ್ತ ಆರ್.ಪಿ.ವೆಂಕಟೇಶಮೂರ್ತಿ, ಲೇಖಕಿ ರೂಪ ಹಾಸನ, ವಕೀಲೆ ಎಂ.ಬಿ.ಗಿರಿಜಾಂಬಿಕಾ, ಪರಿಸರಕ್ಕಾಗಿ ನಾವು ಸಂಘಟನೆ ಕಾರ್ಯದರ್ಶಿ ಪರಶುರಾಮೇಗೌಡ ಅವರು ಇದ್ದರು.

## ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್‌ಗೆ ಸಿಮೆಂಟ್ ಮಂಜು ಆಗ್ರಹ

» ಮೊದಲನೇ ಪುಟದಿಂದ

ವಹಿವಾಟು ಹೆಚ್ಚಾಗುತ್ತದೆ. ಸಣ್ಣಪುಟ್ಟ ಅಂಗಡಿಗಳು, ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಬದಿ ಸಣ್ಣ ಸಣ್ಣ ಕ್ಯಾಂಟೀನ್ ಇಟ್ಟುಕೊಂಡವರಿಗೂ ವ್ಯಾಪಾರ ವಹಿವಾಟು ನಡೆಯುತ್ತದೆ. ಸ್ಥಳೀಯವಾಗಿ ಹೆಚ್ಚು ಜನರಿಗೆ ಉದ್ಯೋಗ ದೊರೆಯುತ್ತದೆ. ಟ್ಯಾಕ್ಸಿಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಸ್ವ ಉದ್ಯೋಗ ಸಹ ಅಭಿವೃದ್ಧಿ ಆಗುತ್ತದೆ. ಆದ್ದರಿಂದ ಸರ್ಕಾರ ಈ ಎಲ್ಲಾ ಲಾಭಗಳನ್ನು ಗಂಭೀರವಾಗಿ ಪರಿ ಗಣಿಸಿ, ಹೋಂ ಸ್ಟೇ ಹಾಗು ರೆಸಾರ್ಟ್ ನಡೆಸುವ ವಿಷಯದಲ್ಲಿ ಹೆಚ್ಚು ಕಾನೂನು ಪ್ರಹಾರ ಮಾಡದೆ, ನೀತಿ ನಿಯಮ ಗಳನ್ನು ಸರಳೀಕರಣ ಮಾಡ ಬೇಕು. ಈ ಎಲ್ಲಾ ವಿಚಾರಗಳನ್ನು ಮುಂದಿನ ವಿಧಾನ ಸಭೆಯಲ್ಲಿ ಚರ್ಚಿಸಲಾಗುವು ದೆಂದರು.

ಹೋಂ ಸ್ಟೇ ಮಾಲೀಕರ ಸಂಘದ ಕಾರ್ಯದರ್ಶಿ ಪ್ರಸನ್ನ ಹಲವು ಬೇಡಿಕೆಗಳನ್ನು ಇಟ್ಟರು. ಹೋಂ ಸ್ಟೇ ಮಾಲೀಕರ ಸಂಘದ ಅಧ್ಯಕ್ಷ ಮಾಲ್ನಡ್ ಪುರುಶೋತ್ತಮ್ ಅಧ್ಯಕ್ಷತೆ ವಹಿಸಿದ್ದರು. ರೆಸಾರ್ಟ್ ಮಾಲೀಕರ ಸಂಘದ ಕಾರ್ಯದರ್ಶಿ ಹರೀಶ್ ಕಾಡುಮಕ್ಕಿ ಇದ್ದರು.

## ಸಿಎಸ್‌ಆರ್ ನಿಧಿ ಸದ್ಬಳಕೆಯಾಗಲಿ: ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಆಲೂರು:** ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್ ಆರ್) ಶಿಕ್ಷಣ, ಆರೋಗ್ಯ ಹಾಗೂ ಮೂಲಸೌಕರ್ಯ ವಲಯದ ಪ್ರಗತಿಗೆ ಹೆಚ್ಚು ಬಳಕೆ ಮಾಡಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕಿನ ಮಗ್ಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಲ್ಲೂರು ಗ್ರಾಮದಲ್ಲಿ ನಲ್ಲೂರಿನಿಂದ ಚಿಕ್ಕ ನಲ್ಲೂರು ವರೆಗಿನ ನೂತನ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರದಿಂದಲೇ ಎಲ್ಲವನ್ನೂ ಮಾಡಲಾಗದು. ಉದ್ಯಮ ವಲಯದ ಬೆಂಬಲವೂ ಬೇಕಾಗುತ್ತದೆ. ಉದ್ಯಮಿಗಳು ಸಿಎಸ್ ಆರ್ ಮೂಲಕ ಕೈ ಜೋಡಿಸಬೇಕು. ಈ ನಿಟ್ಟಿನಲ್ಲಿ ನಿವೃತ್ತ ಚೀಫ್ ಕನ್ಸರ್ವೇಟಿವ್ ಆಫೀಸರ್ ಶಿವಣ್ಣ ಅವರ ಶ್ರಮದಿಂದ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ ಕಂಪನಿಯ ಸಿ.ಎಸ್.ಆರ್. ಫಂಡ್ ನಿಂದ ವೇ ಫಾರ್ ಲೈಫ್ ಎನ್.ಜಿ.ಒ. ಮುಂದಾಳತ್ವದಲ್ಲಿ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ಒಂದೂವರೆ ಕಿ.ಮೀ ನೂತನ ರಸ್ತೆ



ಕಾಮಗಾರಿ ನೆಡೆಯಲಿದೆ ಎಂದು ಹೇಳಿದರು.

ಸಾಮಾಜಿಕ ಹೊಣೆಗಾರಿಕೆ ನಿಧಿಯ ಕುರಿತು ಅಧಿಕಾರಿಗಳು ಮಾಹಿತಿ ಪಡೆದು ಕಾರ್ಪೊರೇಟ್ ಕಂಪನಿಗಳ ಮೂಲಕ ಮೂಲಸೌಕರ್ಯ ಅಭಿವೃದ್ಧಿಗೆ ಮುಂದಾಗುವಂತೆ ತಿಳಿಸಿದರು. ಗ್ರಾಮದಲ್ಲಿರುವ ಮುಜುರಾಯಿ ಇಲಾಖೆಯ ಚೆನ್ನಕೇಶವ ಸ್ವಾಮಿ ದೇವಸ್ಥಾದಲ್ಲಿ ನಿತ್ಯ ಪೂಜೆ ನಡೆಯುತ್ತಿಲ್ಲ ಎಂದು ಗ್ರಾಮಸ್ಥರು ಶಾಸಕರ ಗಮನ ತಂದರು. ಇದಕ್ಕೆ ಸ್ಪಂದಿಸಿದ ಶಾಸಕರು ಕೂಡಲೇ ತಹಶೀಲ್ದಾರ್‌ಗೆ ದೂರವಾಣಿ ಕರೆ ಮಾಡಿ ಮಾಹಿತಿ ಪಡೆದುಕೊಂಡರು. ಈ ವೇಳೆ ಒಂದು ವರ್ಷದ ಹಿಂದೆ ಮೂಲ ವಿಗ್ರಹ ಕಳ್ಳತನವಾಗಿದ್ದು, ಕಳ್ಳತನವಾಗಿದ್ದ ದೇವರ ವಿಗ್ರಹ ಪತ್ತೆಯಾಗಿ ಠಾಣೆಯಲ್ಲಿದರು ಕೂಡ ಪೊಲೀಸ್ ಇಲಾಖೆಯ ನಿಯಮಗಳಿಂದ ವಿಗ್ರಹವನ್ನು ಪುನಃ ದೇವಸ್ಥಾನಕ್ಕೆ ಮರಳಿಸಿಲ್ಲ ಎಂದು ಶಾಸಕ ಸಿಮೆಂಟ್ ಮಂಜು ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಹಿರಿಯ ಪರಿಸರವಾದಿ ಹೆಮ್ಮಿಗೆ ಮೋಹನ್, ಹರೀಶ್, ರಾಜಶೇಖರ್, ಯೋಗೇಶ್, ಮುಖಂಡ ರಾದ ಲಿಖಿತ್, ಅಬ್ಬನ ಕೃಷ್ಣಮೂರ್ತಿ, ಪೂವಯ್ಯ, ಚೇತನ್, ವಿಜಯ ಕುಮಾರ್, ರವಿ ಕುಮಾರ್, ದಿನೇಶ್ ಪಿಡಿಒ ಪರಮೇಶ್ ಉಪಸ್ಥಿತರಿದ್ದರು.

## ಬಿಜೆಪಿ ಯೋಜನೆಗಳಿಗೆ ಸಿಎಂ ಚಾಲನೆ: ದೇವರಾಜೇಗೌಡ

• ಪ್ರಜೋದಯ ವರದಿ

**ಹಾಸನ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.6 ರಂದು ಉದ್ಘಾಟನೆ ನೆರವೇರಿಸಲು ಬರುತ್ತಿರುವ ತಾಲ್ಲೂಕು ಕಚೇರಿ, ಬಸ್ ನಿಲ್ದಾಣ ಬಳಿಯ ಉದ್ಯಾನ ವನ, ಅಗ್ನಿಶಾಮಕ ಠಾಣೆ, ಗ್ರಂಥಾಲಯ ಮಾಡಿದ್ದು ಬಿಜೆಪಿ ಸರ್ಕಾರ ಎಂದು ಬಿಜೆಪಿ ಮುಖಂಡ ದೇವರಾಜೇಗೌಡ ಅವರು ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಅಭಿವೃದ್ಧಿಗೆ ಯಾವುದೇ ಅನುದಾನ ನೀಡದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಸಚಿವ ಸಂಪುಟ ಸದಸ್ಯರು ಹಾಸನಕ್ಕೆ ಬರುತ್ತಿರುವುದು ಹಾಸ್ಯಾಸ್ಪದ. ಜಿಲ್ಲೆಗೆ ಅವರ ಕೊಡುಗೆ ಏನು, ಏನು ಸಾಧನೆ ಮಾಡಿದ್ದಾರೆ. ಎಷ್ಟು ಅನುದಾನ ಕೊಟ್ಟಿದ್ದಾರೆ. ಅವರ ಅವಧಿಯಲ್ಲಿ ಏನೆಲ್ಲ ಅಭಿವೃದ್ಧಿ ಕೆಲಸ ಆಗಿವೆ ಎಂಬುದನ್ನು ಜನರ ಮುಂದೆ ಹೇಳಲಿ ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಜ್ವಲಂತ ಸಮಸ್ಯೆ ಇವೆ. ಬೆಳೆ ಪರಿಹಾರ ಕೊಟ್ಟಿಲ್ಲ, ಬೆಂಬಲ ಬೆಲೆ ಬೇಡಿಕೆಗೆ ಸ್ಪಂದಿಸಿಲ್ಲ ಎಂದು ರೈತರು



ಪ್ರತಿಭಟನೆ ನಡೆಸುತ್ತಿದ್ದಾರೆ. ಕಬ್ಬು ಬೆಳೆಗಾರರ ಮೇಲೆ ಲಾಠಿಚಾರ್ಜ್ ಆಗಿದೆ. ನಿರುದ್ಯೋಗ ನಿವಾರಣೆ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪರಸ್ಪರ ಬ್ರೇಕ್‌ಫಾಸ್ಟ್ ಮೂಲಕ ಕಾಲಹರಣ ಮಾಡುತ್ತಿದ್ದಾರೆಂದು ಟೀಕಿಸಿದರು.

ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಸುಮಾರು 4 ಕೋಟಿ ರೂ. ಖರ್ಚಾಗುತ್ತಿದೆ. ಅಷ್ಟು ಅನುದಾನವನ್ನು ಜಿಲ್ಲೆಗೆ ಕೊಟ್ಟಿದ್ದಾರಾ ಹೇಳಲಿ, ಯಾವ ಮುಖ ಹೊತ್ತು ಸಿಎಂ ಹಾಸನಕ್ಕೆ ಬರುತ್ತಿದ್ದಾರೆ. ಅವರಿಗೆ ನೈತಿಕತೆ ಇದ್ದರೆ ಕಾರ್ಯಕ್ರಮ ರದ್ದುಪಡಿಸಬೇಕು. ಅದೇ ಹಣವನ್ನು ಕೆಲವು ಇಲಾಖೆಗಳಲ್ಲಿ ಸಂಬಳ ಆಗಿಲ್ಲ. ಅಲ್ಲಿಗೆ ಕೊಡಬೇಕು. ಮುಂದಿನ ದಿನಗಳಲ್ಲಿ ನಾಡಿನ ಜನ ತಕ್ಕ ಪಾಠ ಕಲಿಸಲಿದ್ದಾರೆಂದು ಎಚ್ಚರಿಸಿದರು.

## ದ.ಆಫ್ರಿಕಾ ವಿರುದ್ಧದ ಟಿ-20 ಪಂದ್ಯಕ್ಕೆ ಗಿಲ್ ಉಪನಾಯಕ

**ರಾಯಪುರ:** ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಕುತ್ತಿಗೆ ನೋವಿನಿಂದಾಗಿ ತಂಡದಿಂದ ಹೊರಬಿದ್ದಿದ್ದ ಭಾರತ ಕ್ರಿಕೆಟ್ ತಂಡದ ಏಕದಿನ ಹಾಗೂ ಟೆಸ್ಟ್ ತಂಡದ ನಾಯಕ ಶುಭಮನ್ ಗಿಲ್ ಅವರು ಚೇತರಿಸಿಕೊಂಡಿದ್ದು, ದಕ್ಷಿಣ ಆಫ್ರಿಕಾ ವಿರುದ್ಧದ ಟಿ-20 ಸರಣಿಗೆ ಉಪನಾಯಕನನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಬಿಸಿಸಿಐ ಮೂಲಗಳು ಬುಧವಾರ ತಿಳಿಸಿವೆ.

ಗಿಲ್ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ ಮತ್ತು ಅವರನ್ನು ತಂಡಕ್ಕೆ ಸೇರಿಸಿ ಕೊಳ್ಳಲಾಗಿದೆ. ಫಿಟ್‌ನೆಸ್ ಪರಿಶೀಲಿಸಿದ ನಂತರ ಅವರು ಉಪ ನಾಯಕನಾಗಿ ಮರಳಲಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧ ಆರಂಭವಾಗಲಿರುವ ಟಿ-20 ಸರಣಿಗೆ ತಂಡವನ್ನು ಆಯ್ಕೆ ಮಾಡುವ ಕುರಿತು ಬುಧವಾರ ಕರೆದ ಸಭೆಯಲ್ಲಿ, ಸೂರ್ಯಕುಮಾರ್ ಯಾದವ್ ಟಿ-20 ತಂಡದ ನಾಯಕತ್ವದಲ್ಲಿ ಮುಂದುವರೆದಿದ್ದು, ಶುಭಮನ್ ಗಿಲ್ ಉಪನಾಯಕನರನ್ನಾಗಿ ನೇಮಿಸಲಾ ಗುವುದು ಎಂದು ಬಿಸಿಸಿಐ ಮೂಲಗಳು ತಿಳಿಸಿದೆ.

## ಅಂಧ ವ್ಯಕ್ತಿ ಮೇಲೆ ಹಲ್ಲೆ ಆರೋಪ




• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಮಡೆನೂರು ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ ವಿಚಾರದಲ್ಲಿ ನನ್ನ ಹಾಗು ನನ್ನ ಸಂಬಂಧಿ ಚಂದನ್ ಮೇಲೆ ಕೆಲವರು ಹಲ್ಲೆ ಮಾಡಿದ್ದಾರೆಂದು ಅಂಧ ವ್ಯಕ್ತಿ ನವೀನ್ ಹೂವಿನಹಳ್ಳಿ ಅವರು ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಡಿ.1ರಂದು ಮಧ್ಯಾಹ್ನ ಷೇರಿನ ಹಣ ಕಟ್ಟಿ ಚಂದನ್ ಜೊತೆ ವಾಪಾಸ್ ಬರುವಾಗ ಹೂವಿನಹಳ್ಳಿ ಹಾಗು ಅಕ್ಕ ಪಕ್ಕದ ಗ್ರಾಮಗಳ ನಿವಾಸಿಗಳಾದ ಪ್ರಕಾಶ್, ಸ್ವಾಮಿ, ಅಮರ್ ಮತ್ತು ರಾಜ ಎಂಬುವವರು ನನ್ನನ್ನು ತಡೆ ನಿನಗೆ ಕಣ್ಣು ಕಾಣುವುದಿಲ್ಲ, ನಾನು ಚುನಾವಣೆಗೆ ಸ್ಪರ್ಧೆ ಮಾಡುತ್ತೇನೆಂಬ ಕಾರಣಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿದರು. ಅದನ್ನು ತಡೆಯಲು ಬಂದ ಚಂದನ್ ಮೇಲೂ ಇಟ್ಟಿಗೆಯಿಂದ ಹಲ್ಲೆ ಮಾಡಿದರೆಂದು ಆರೋಪಿಸಿದರು.

ಕೃಷ್ಣಕುಮಾರ್ ಎಂಬುವವರು ಜಗಳ ಬಿಡಿಸಿ, ಗಾಯಾಳು ಚಂದನ್ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆ ನಂತರ ಈಗ ಬಿಡುಗಡೆ ಆಗಿದ್ದಾರೆ. ಈ ಸಂಬಂಧ ಶಾಂತಿ ಗ್ರಾಮ ಠಾಣೆಗೆ ದೂರು ನೀಡಲಾಗಿದೆ. ನಮ್ಮ ಮೇಲೆ ಹಲ್ಲೆ ಮಾಡಿದ ನಾಲ್ವರಿಂದ ನಮಗೆ ಜೀವ ಭಯ ಇದೆ. ನಮಗೆ ಸೂಕ್ತ ರಕ್ಷಣೆ ನೀಡುವಂತೆ ಮನವಿ ಮಾಡಿದರು.

ನಾನು ಅಂಧ ಇರಬಹುದು, ನಾನು ಚುನಾವಣೆಗೆ ಸ್ಪರ್ಧೆ ಮಾಡುವಂತಿಲ್ಲವೇ, ಅಂಗವಿ ಕಲರು ನಿಲ್ಲುವ ಹಾಗಿಲ್ಲವೇ ಎಂದು ಪ್ರಶ್ನಿಸಿದ ಅವರು, ಸಹಕಾರ ಸಂಘದ ಅಕ್ರಮಗಳನ್ನು ಬಯಲು ಮಾಡಿ ಲೋಕಾಯುಕ್ತ ಸೇರಿ ಅನೇಕರಿಗೆ ದೂರಿ ನೀಡಿದ್ದರಿಂದಲೇ ನನ್ನ ಮೇಲೆ ಹಗೆಸಾಧಿಸಲಾಗುತ್ತಿದೆಂದು ದೂರಿದರು.

ಗಾಯಾಳು ಚಂದನ್, ನವೀನ್ ಪತ್ನಿ ನೇತ್ರಾವತಿ, ಪುತ್ರ ವೇಣು ಇದ್ದರು.

## ಸಂಚಾರ ಸಾಥಿ ಆ್ಯಪ್ ಕಡ್ಡಾಯ: ಆದೇಶ ವಾಪಾಸ್

• ಪ್ರಜೋದಯ ವರದಿ

**ನವದೆಹಲಿ:** ಕೇಂದ್ರ ಸರ್ಕಾರವು ಮೊಬೈಲ್‌ಗಳಲ್ಲಿ ಸಂಚಾರ ಸಾಥಿ ಆ್ಯಪ್ ಅಳವಡಿಕೆ ಕಡ್ಡಾಯಗೊಳಿಸುವ ಆದೇಶವನ್ನು ಬುಧವಾರ ಹಿಂಪಡೆದಿದೆ.

ಮೊಬೈಲ್‌ಗಳಲ್ಲಿ ಸಂಚಾರ ಸಾಥಿ ಆ್ಯಪ್ ಪ್ರಿ-ಇನ್‌ಸ್ಟಾಲ್ ಮಾಡುವುದಕ್ಕೆ ಕಾಂಗ್ರೆಸ್ ಸೇರಿ ವಿಪಕ್ಷಗಳಿಂದ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಒಂದೇ ದಿನದಲ್ಲಿ ಸ್ವಯಂ ಪ್ರೇರಿತವಾಗಿ ಸಂಚಾರ ಸಾಥಿ ಆ್ಯಪ್ ಡೌನ್ ಲೋಡ್ ಮಾಡಿಕೊಂಡವರ ಪ್ರಮಾಣ 10 ಪಟ್ಟು ಏರಿಕೆಯಾಗಿತ್ತು. ಬಳಕೆದಾರರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಬಳಕೆದಾರರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಉದ್ದೇಶವಾಗಿತ್ತು. ಕಳೆದೊಂದು ದಿನದಲ್ಲಿ 6 ಲಕ್ಷ ಮಂದಿ ಆ್ಯಪ್ ಡೌನ್‌ಲೋಡ್ ಮಾಡಿದ್ದು, 10 ಪಟ್ಟು ಹೆಚ್ಚಳ ಕಂಡು ಬಂದಿದೆ. ಆ್ಯಪ್‌ಗೆ ಹೆಚ್ಚುತ್ತಿರುವ ಬೆಂಬಲದ ಹಿನ್ನಲೆಯಲ್ಲಿ ಪ್ರಿ-ಇನ್‌ಸ್ಟಾಲ್ ಕಡ್ಡಾಯಗೊಳಿಸದಿರಲು ನಿರ್ಧರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಹಿಂದೂ ಧರ್ಮ ರಕ್ಷಣೆಗೆ ಕಂಕಣಬದ್ಧರಾಗಿ: ಚನ್ನಸಿದ್ದೇಶ್ವರ ಶ್ರೀ



• ಪ್ರಜೋದಯ ವರದಿ

**ಸಕಲೇಶಪುರ:** ಹೆಗಲ ಮೇಲೆ ಕೇಸರಿ ಶಲ್ಯ ಹಣೆ ಮೇಲೆ ತಿಲಕ ಇಟ್ಟರೆ ಸಾಲುವುದಿಲ್ಲ, ಧರ್ಮ ರಕ್ಷಣೆಗೆ ಸದಾ ಕಂಕಣಬದ್ಧರಾಗಿರಬೇಕೆಂದು ತೆಂಕಲ ಗೋಡು ಚನ್ನಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಆಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ ದತ್ತಮಾಲಾ ಅಭಿಯಾನ ಅಂಗವಾಗಿ ಆಯೋಜಿಸಿದ್ದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿ, ಧರ್ಮ ಯಾರಿಗೂ ಬೇಡ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಅಮೇರಿಕಾ ದೊಡ್ಡಣ್ಣನ ರೀತಿಯಲ್ಲಿ ಜಗತ್ತಿನ ಕಪಿಮುಷ್ಟಿಯಲ್ಲಿಟ್ಟುಕೊಂಡಿದ್ದು ಇಂಗ್ಲೆಂಡ್ ಸಹ ಅದೇ ರೀತಿಯಲ್ಲಿ ಅರ್ಧ ಜಗತ್ತನ್ನು ಹಿಡಿತದಲ್ಲಿ ಇಟ್ಟುಕೊಂಡಿತ್ತು. ಭಾರತ ತಾನಾಗಿಯೇ ಯಾವ ದೇಶದ ಮೇಲು ದಂಡೆತ್ತಿ ಹೋಗಿಲ್ಲ, ಹಿಂದೂಗಳ ಸಹನೆ ಹೆಚ್ಚಾಗಿದ್ದರಿಂದ ಧರ್ಮದ ಮೇಲೆ ಪೆಟ್ಟು ಬೀಳುತ್ತಿದೆ. ಯಾರು ಧರ್ಮ ಕಾಪಾಡುತ್ತಾರೋ ಅವರು ಉಳಿಯುತ್ತಾರೆ. ನಾವು ಎಚ್ಚೆತ್ತುಕೊಳ್ಳದಿದ್ದರೆ ಧರ್ಮ ಉಳಿಯಲು ಸಾಧ್ಯವಿಲ್ಲ. ಲಕ್ಷಾಂತರ ಮಂದಿಯ ತ್ಯಾಗದಿಂದ ಅಯೋಧ್ಯೆ ನಮ್ಮದಾಯಿತು. ಹಿಂದೂಗಳ ರಕ್ಷಣೆಗೆ ಸಂಘ ಟನೆ ಅನಿವಾರ್ಯತೆ ಹೆಚ್ಚಿದೆ. ಒಟ್ಟಾಗಿ ಹೋದರಷ್ಟೇ ಸಂಘಟನೆ ಸದೃಢವಾಗುತ್ತದೆಂದು ಹೇಳಿದರು.

ಹಿಂದೂ ಜಾಗರಣ ವೇದಿಕೆ ಪ್ರಾಂತ ಸಹ ಸಂಯೋಜಕ ಸತೀಶ್ ಪೂಜಾರಿ ಅವರು ಮಾತನಾಡಿ, ಡಿ.6ರ ದಿನವನ್ನು ಪ್ರತಿ ಯೊಬ್ಬರು ಸ್ಮರಿಸಬೇಕು. ದತ್ತಪೀಠವನ್ನು ಹಿಂದೂಗಳಿಗೆ ಒಪ್ಪಿಸದಿದ್ದರೆ ಮುಂದೊಂದು ದಿನ ಪಶ್ಚಾತಾಪ ಪಡಬೇಕಾಗುತ್ತದೆ. ಹಿಂದೂಗಳಿಗೆ ಸೌಹಾರ್ದತೆ ಪಾಠವನ್ನು ಯಾರೂ ಹೇಳಬೇಕಿಲ್ಲ. ಹಿಂದೂಗಳು ಮುಸ್ಲಿಂ, ಕ್ರಿಶ್ಚಿಯನ್ ಧರ್ಮವನ್ನು ಒಪ್ಪು ತ್ತೇವೆ. ಆದರೆ ಅವರು ನಮ್ಮನ್ನು ಒಪ್ಪುತ್ತಾರಾ ಎಂದು ಪ್ರಶ್ನಿಸಿದರು.

ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ವಿಶ್ವ ಹಿಂದೂ ಪರಿಷತ್ ಮುಖಂಡರಾದ ಕರಡಿಗಾಲ ಹರೀಶ್, ಬಿರಡಹಳ್ಳಿ ಬಾಲಕೃಷ್ಣ, ವಿಜಯ್ ಕುಮಾರ್, ರಘು ಪ್ರಸಾದ್, ಮಹೇಂದ್ರ, ವಿಷ್ಣು ಹಾಜರಿದ್ದರು.

## ಹಣ ಗಳಿಕೆಯೊಂದೇ ವಕೀಲರ ಆದ್ಯತೆಯಾಗಬಾರದು

» ಮೊದಲನೇ ಪುಟದಿಂದ

ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುತ್ತಾರೆ. 1931ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲು ಸೇರುತ್ತಾರೆ. 1942 ಕ್ವಿಟ್ ಇಂಡಿಯಾ ಮೂವ್‌ಮೆಂಟ್‌ನಲ್ಲಿ ಪಾಲ್ಗೊಂಡು ಜೈಲು ಸೇರುತ್ತಾರೆ. ಡಾ.ರಾಜೇಂದ್ರ ಪ್ರಸಾದ್ ಅವರು ಸ್ವಾತಂತ್ರ್ಯ ಹೋರಾಟಗಾರ, ವಿದ್ವಾಂಸ ಎಲ್ಲವೂ ಆಗಿದ್ದರು. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರಿಗೆ ಕಾನೂನಾತ್ಮಕವಾಗಿ ಅನೇಕ ಸಲಹೆ ನೀಡಿದ್ದಾರೆಂದರು.

ಸಂವಿಧಾನ ರಚನೆಯಲ್ಲಿ ಅವರು ನೀಡಿದ ಕೊಡುಗೆ ಅಪಾರವಾಗಿದೆ. ಸಂವಿಧಾನ ಕರಡು ರಚನಾ ಸಮಿತಿ ಯಲ್ಲಿ 398 ವಕೀಲರಿರುತ್ತಾರೆ. ಅದರಲ್ಲಿ ಇಬ್ಬರು ಮಹಿಳಾ ವಕೀಲರು ಇದ್ದರು. ರಾಷ್ಟ್ರ ಸ್ವಾತಂತ್ರ್ಯ ಹಾಗು ಸಂವಿಧಾನ ರಚನೆಯಲ್ಲಿ ವಕೀಲರ ಪಾತ್ರ ಹೆಚ್ಚಿದೆ ಎಂಬುದನ್ನು ಯಾವ ಕಾರಣಕ್ಕೂ ಮರೆಯಬಾರದೆಂದು ಕಿವಿಮಾತು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣ ಗೌಡ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಕೀಲರ ದಿನಾಚರಣೆ ಪ್ರಯುಕ್ತ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆ ಆಯೋಜಿಸಲಾಗಿತ್ತು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಮಹಾಗಣಪತಿ ಪೂಜೆ ನೆರವೇರಿಸಲಾಯಿತು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ನ್ಯಾಯಾಧೀಶರಾದ ದೇವರಾಜ್, ಶೀಲಾ, ಹಿದಾಯತ್, ಆನಂದ್, ರವಿ, ಪತ್ರಕರ್ತ ಶಶಿಧರ್ ಭಟ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಒಂಬೇಶ್, ಉಪಾಧ್ಯಕ್ಷ ಎಂ.ಟಿ.ತಿಮ್ಮೇಗೌಡ, ಎ.ಜೆ.ರಘು, ಬಿ.ಚಂದ್ರಶೇಖರ್ ಇತರರಿದ್ದರು.


**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಕಲಗೂಡು**

**ಕಛೇರಿ ದೂರವಾಣಿ: 08175221779**

ಸಂಖ್ಯೆ:ಕೃಮಾಇ/ಕೃಉಮಾಸ(ಅರಕ)/235/2025-26

ದಿನಾಂಕ: 28/11/2025

**ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮೂಲಕ)**

2025-26 ನೇ ಸಾಲಿಗಾಗಿ ಅರಕಲಗೂಡು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಭದ್ರತಾ ಸೇವೆಗಾಗಿ ಸಂಬಂಧಿಸಿದ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್‌ಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ. 1)ಭರ್ತಿ ಮಾಡಿದ ಇ-ಟೆಂಡರ್ ಸ್ವೀಕರಿಸಲು ಕೊನೆಯದಿನಾಂಕ: 15-12-2025 ಸಂಜೆ 5:00 ಗಂಟೆವರೆಗೆ. 2)ಇ-ಟೆಂಡರ್‌ಗಳನ್ನು ತೆರೆಯುವದಿನಾಂಕ: 17-12-2025 ಪೂರ್ವಾಹ್ನ 11-00 ಗಂಟೆಗೆ. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ-ಪೋರ್ಟಲ್‌ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳು ಇ-ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ https://kppp.karnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ. ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ನೊಂದಾಯಿಸುವ ಬಗ್ಗೆ ಸಹಾಯವಾಣಿ ದೂರವಾಣಿ ಸಂಖ್ಯೆ+91-8046010000 ಅಥವಾ +91-8068948777 ಮತ್ತು support@eprochelpdesk.com ನ್ನು ಸಂಪರ್ಕಿಸಬಹುದು.

ಸಹಿ/-ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಕಲಗೂಡು

ಸಹಿ/-ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಕಲಗೂಡು

ವಾಸಾಸಂಇ/ಹಿಸನಿ/ಹಾಸನ/816/ಕೆಎಸ್ಎಂಸಿಎ/2025-26


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK